# ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980

(1980ರ ಅಧಿನಿಯಮ ಸಂಖ್ಯೆ 56)

**[3-9-2001 ರ ಭಾರತ ರಾಜಪತ್ರದ IX ನೇ ಭಾಗದ 1ನೇ ವಿಭಾಗದ 18ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 14 ರಿಂದ 32 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**


**ಅಧ್ಯಾಯ-I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು ಮತ್ತು ಅರ್ಥ ವಿವರಣೆ

**ಅಧ್ಯಾಯ-II**

**ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ**

3. ಸಂಸ್ಥೆಯ ನಿಗಮನ
4. ರಿಜಿಸ್ಟರಿನಲ್ಲಿ ಹೆಸರುಗಳನ್ನು ನಮೂದಿಸುವುದು
5. ಸಹವರ್ತಿ ಸದಸ್ಯರು ಮತ್ತು ಅಧಿಸದಸ್ಯರು
6. ವೃತ್ತಿ ಪ್ರಮಾಣಪತ್ರ
7. ಸದಸ್ಯರನ್ನು ಕಂಪನಿ ಕಾರ್ಯದರ್ಶಿಗಳೆಂದು ಕರೆಯುವುದು
8. ಅಸಮರ್ಥತೆಗಳು

**ಅಧ್ಯಾಯ-III**

**ಸಂಸ್ಥೆಯ ಪರಿಷತ್ತು**

9. ಸಂಸ್ಥೆಯ ಪರಿಷತ್ತಿನ ರಚನೆ
10. ಪರಿಷತ್ತಿನ ಚುನಾವಣೆಯ ವಿಧಾನ
11. ಚುನಾವಣೆ ತಪ್ಪಿದಲ್ಲಿ ನಾಮನಿರ್ದೇಶನ
12. ಅಧ್ಯಕ್ಷ ಮತ್ತು ಉಪಾಧ್ಯಕ್ಷ
13. ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು ಮತ್ತು ಆಕಸ್ಮಿಕವಾಗಿ ಸ್ಥಾನಗಳು ಖಾಲಿಯಾಗುವುದು
14. ಪರಿಷತ್ತಿನ ಕಾಲಾವಧಿ ಮತ್ತು ವಿಸರ್ಜನೆ
15. ಪರಿಷತ್ತಿನ ಪ್ರಕಾರ್ಯಗಳು
16. ಸಿಬ್ಬಂದಿ, ಪರಿಶ್ರಮಧನ ಮತ್ತು ಭತ್ಯೆಗಳು
17. ಪರಿಷತ್ತಿನ ಸಮಿತಿಗಳು
18. ಪರಿಷತ್ತಿನ ಹಣಕಾಸುಗಳು

**ಅಧ್ಯಾಯ-IV**

**ಸದಸ್ಯರ ರಿಜಿಸ್ಟರು**


19. ರಿಜಿಸ್ಟರು

20. ರಿಜಿಸ್ಟರಿನಿಂದ ತೆಗೆದುಹಾಕುವುದು


**ಅಧ್ಯಾಯ-V**

**ದುರ್ನಡತೆ**


21. ಸಂಸ್ಥೆಯ ಸದಸ್ಯರ ದುರ್ನಡತೆಯ ಸಂಬಂಧದಲ್ಲಿ ನಡೆಸುವ ವಿಚಾರಣೆಗಳ ಪ್ರಕ್ರಿಯೆ

22. ವೃತ್ತಿ ದುರ್ನಡತೆಯ ಪರಿಭಾಷೆ


**ಅಧ್ಯಾಯ-VI**

**ಪ್ರಾದೇಶಿಕ ಪರಿಷತ್ತುಗಳು**


23. ಪ್ರಾದೇಶಿಕ ಪರಿಷತ್ತುಗಳ ರಚನೆ ಮತ್ತು ಪ್ರಕಾರ್ಯಗಳು


**ಅಧ್ಯಾಯ-VII**

**ದಂಡನೆಗಳು**


24. ಸದಸ್ಯ ಮುಂತಾದವನಾಗಿರುವನೆಂದು ಸುಳ್ಳು ಹೇಳಿದ್ದಕ್ಕೆ ದಂಡನೆ

25. ಪರಿಷತ್ತಿನ ಹೆಸರನ್ನು ಬಳಸಿದ್ದಕ್ಕಾಗಿ ಅಥವಾ ಕಂಪನಿ ಕಾರ್ಯದರ್ಶಿಯ ಪದವಿ ನೀಡಿದ್ದಕ್ಕಾಗಿ ದಂಡನೆ

26. ಕಂಪನಿಗಳು, ಕಂಪನಿ ಕಾರ್ಯದರ್ಶಿತ್ವದಲ್ಲಿ ತೊಡಗದಿರುವುದು

27. ಅನಧಿಕೃತ ವ್ಯಕ್ತಿಗಳು ದಸ್ತಾವೇಜುಗಳಿಗೆ ಸಹಿ ಹಾಕದಿರುವುದು

28. ಕಂಪನಿಗಳಿಂದ ಅಪರಾಧಗಳು

29. ಕಾನೂನು ಕ್ರಮ ಜರುಗಿಸಲು ಮಂಜೂರಾತಿ


**ಅಧ್ಯಾಯ-VIII**

**ಅಪೀಲುಗಳು**


30. ಅಪೀಲು


**ಅಧ್ಯಾಯ-IX**

**ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯ ವಿಸರ್ಜನೆ**


31. ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯ ವಿಸರ್ಜನೆ

32. ವಿಸರ್ಜಿತ ಕಂಪನಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸಂಸ್ಥೆಗೆ ವರ್ಗಾಯಿಸುವುದು

33. ವಿಸರ್ಜಿತ ಕಂಪನಿಯ ನೌಕರರಿಗೆ ಸಂಬಂಧಿಸಿದ ಉಪಬಂಧ

## ಅಧ್ಯಾಯ-X
### ಸಂಕೀರ್ಣ


34. ರಿಜಿಸ್ಟರಿನಲ್ಲಿ ಮಾರ್ಪಾಟು ಮತ್ತು ಪ್ರಮಾಣ ಪತ್ರದ ರದ್ದಿಯಾತಿ

35. ಕೇಂದ್ರ ಸರ್ಕಾರದ ನಿರ್ದೇಶನಗಳು

36. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ

37. ಶಾಖಾ ಕಚೇರಿಗಳ ನಿರ್ವಹಣೆ

38. ಪರಸ್ಪರತೆ

39. ವಿನಿಯಮ ರಚನಾಧಿಕಾರ

ಮೊದಲನೇ ಅನೂಸೂಚಿ

ಎರಡನೇ ಅನುಸೂಚಿ

# ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980

**(1980ರ ಅಧಿನಿಯಮ ಸಂಖ್ಯೆ 56)**

ಕಂಪನಿ ಕಾರ್ಯದರ್ಶಿಗಳ ವೃತ್ತಿಯ ನಿಯಂತ್ರಣ ಮತ್ತು ಅಭಿವೃದ್ಧಿಯನ್ನು ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಲ್ಲಿ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:–

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.** – (1) ಈ ಅಧಿನಿಯಮವನ್ನು ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980 ಎಂದು ಕರೆಯತಕ್ಕದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ರಾಜಪತ್ರದಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರುತ್ತದೆ.

**2. ಪರಿಭಾಷೆಗಳು ಮತ್ತು ಅರ್ಥ ವಿವರಣೆ.**– (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,–

(ಎ) "ಸಹವರ್ತಿ" ಎಂದರೆ ಸಂಸ್ಥೆಯ ಸಹವರ್ತಿ ಸದಸ್ಯ;

(ಬಿ) "ಕಂಪನಿಗಳ ಅಧಿನಿಯಮ" ಎಂದರೆ ಕಂಪನಿಗಳ ಅಧಿನಿಯಮ, 1956;

(ಸಿ) "ಕಂಪನಿ ಕಾರ್ಯದರ್ಶಿ" ಎಂದರೆ, ಸಂಸ್ಥೆಯ ಸದಸ್ಯನಾಗಿರುವ ವ್ಯಕ್ತಿ;

(ಡಿ) "ಪರಿಷತ್ತು" ಎಂದರೆ, 9ನೇ ಪ್ರಕರಣದ ಮೇರೆಗೆ ರಚಿಸಲಾದ ಸಂಸ್ಥೆಯ ಪರಿಷತ್ತು;

(ಇ) "ವಿಸರ್ಜಿತ ಕಂಪನಿ" ಎಂದರೆ ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ;

(ಎಫ್) "ಅಧಿಸದಸ್ಯ" ಎಂದರೆ ಸಂಸ್ಥೆಯ ಅಧಿಸದಸ್ಯ ;

(ಜಿ) "ಸಂಸ್ಥೆ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ;

(ಹೆಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ಅಧ್ಯಕ್ಷ" ಎಂದರೆ ಪರಿಷತ್ತಿನ ಅಧ್ಯಕ್ಷ;

(ಜೆ) "ರಿಜಿಸ್ಟರು" ಎಂದರೆ ಈ ಅಧಿನಿಯಮದ ಮೇರೆಗೆ ನಿರ್ವಹಿಸಲಾದ ಸಂಸ್ಥೆಯ ಸದಸ್ಯರುಗಳ ರಿಜಿಸ್ಟರು;

(ಕೆ) "ಉಪಾಧ್ಯಕ್ಷ" ಎಂದರೆ ಪರಿಷತ್ತಿನ ಉಪಾಧ್ಯಕ್ಷ;

(ಎಲ್) "ವರ್ಷ" ಎಂದರೆ ಯಾವುದೇ ವರ್ಷದ ಏಪ್ರಿಲ್ 1ನೆಯ ದಿನದಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31ನೆಯ ದಿನದಂದು ಮುಕ್ತಾಯಗೊಳ್ಳುವ ಅವಧಿ;

(ಎಂ) ಇಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಆದರೆ ಕಂಪನಿಗಳ ಅಧಿನಿಯಮದಲ್ಲಿ ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕುದು.

(2) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನು ಹೊರತುಪಡಿಸಿ, ಸಂಸ್ಥೆಯ ಒಬ್ಬ ಸದಸ್ಯನು ನಿಯಮಿಸಬಹುದಾದಂತಹ ಇತರ ಮನ್ನಣೆ ಪಡೆದ ವೃತ್ತಿಗಳ ಸದಸ್ಯರೊಂದಿಗೆ ವೃತ್ತಿಯಲ್ಲಿ ಅಥವಾ ಪಾಲುದಾರನಾಗಿ ವೈಯಕ್ತಿಕವಾಗಿ ಅಥವಾ ಸಂಸ್ಥೆಯ ಒಬ್ಬ ಸದಸ್ಯನೊಂದಿಗೆ ಅಥವಾ ಹೆಚ್ಚು ಜನ ಸದಸ್ಯರೊಂದಿಗೆ ಪಾಲುದಾರನಾಗಿ ಸ್ವೀಕರಿಸಿದ ಅಥವಾ ಸ್ವೀಕರಿಸಬೇಕಾದ ಪರಿಶ್ರಮಧನದ ಪ್ರತಿಫಲಕ್ಕಾಗಿ,-

(ಎ) ಯಾವುದೇ ಕಂಪನಿಯ ಅಥವಾ ಅದರ ಸಂಬಂಧದಲ್ಲಿ ಕಂಪನಿ ಕಾರ್ಯದರ್ಶಿ ವೃತ್ತಿಯಲ್ಲಿ ವೈಯಕ್ತಿಕವಾಗಿ ತೊಡಗಿರುವಾಗ ; ಅಥವಾ

(ಬಿ) ಕಂಪನಿಗಳ ಪ್ರವರ್ತನೆ, ರಚನೆ, ನಿಗಮನ, ವಿಲೀನೀಕರಣ, ಪುನರ್ ನಿರ್ಮಾಣ,ಪುನರ್ ಸಂಘಟನೆ ಅಥವಾ ಸಮಾಪನ- ಇವುಗಳಿಗೆ ಸಂಬಂಧಿಸಿದ ಸೇವೆಗಳನ್ನು ನೆರವೇರಿಸಲು ಒಪ್ಪಿಕೊಂಡಾಗ ಅಥವಾ ನೆರವೇರಿಸುವಾಗ;

(ಸಿ) (i)ಕಂಪನಿಯು ಅಥವಾ ಕಂಪನಿಯ ಪರವಾಗಿ (ನಮೂನೆಗಳು, ಅರ್ಜಿಗಳು ಮತ್ತು ವಿವರ ಪಟ್ಟಿಕೆಗಳು ಸೇರಿ) ಯಾವುದೇ ದಸ್ತಾವೇಜನ್ನು ಭರ್ತಿ ಮಾಡುವುದು, ನೋಂದಾಯಿಸುವುದು, ಸಲ್ಲಿಸುವುದು, ಅನುಪ್ರಮಾಣಿಸುವುದು ಅಥವಾ ಸತ್ಯಾಪನೆ ಮಾಡುವುದು- ಇವುಗಳಿಗೆ ಸಂಬಂಧಿಸಿದಂತೆ ಕಂಪನಿಯ ಅಧಿಕೃತ ಪ್ರತಿನಿಧಿಯು,

(ii) ಷೇರು ವರ್ಗಾವಣೆ ಏಜೆಂಟ್,

(iii) ನೀಡಿಕೆ ಕೇಂದ್ರ,

(iv) ಷೇರು ಮತ್ತು ಸ್ಟಾಕು ದಳ್ಳಾಳಿ,

(v) ಸಚಿವಾಲಯ ಲೆಕ್ಕ ಪರಿಶೋಧಕ ಅಥವಾ ಸಲಹೆಗಾರ,

(vi)ಬಂಡವಾಳ ನೀಡಿಕೆ (ನಿಯಂತ್ರಣ) ಅಧಿನಿಯಮ, 1947, ಕೈಗಾರಿಕಾ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1951, ಕಂಪನಿಗಳ ಅಧಿನಿಯಮ, 1956, ಭದ್ರತೆಗಳ ಒಪ್ಪಂದ (ವಿನಿಯಮ) ಅಧಿನಿಯಮ, 1956, ಮನ್ನಣೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್ ರಚಿಸಿದ ಯಾವುವೇ ನಿಯಮಗಳು ಅಥವಾ ಉಪವಿಧಿಗಳು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಅಧಿನಿಯಮ, 1969, ವಿದೇಶಿ ವಿನಿಮಯ ವಿನಿಯಮನ ಅಧಿನಿಯಮ, 1973 - ಇವುಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಬರುವ ಯಾವುದೇ ಕಾನೂನು ಅಥವಾ ಪ್ರಕ್ರಿಯಾ ವಿಷಯಗಳು ಸೇರಿ ವ್ಯವಸ್ಥಾಪನೆಯ ಸಂಬಂಧದಲ್ಲಿ ಕಂಪನಿಯ ಸಲಹೆಗಾರನು ನೆರವೇರಿಸಬಹುದಾದಂಥ, ಮತ್ತು

(vii) ಕಂಪನಿಯ ಪರವಾಗಿ ಅಥವಾ ಅದರ ಉದ್ದೇಶಗಳಿಗಾಗಿ ಪ್ರಮಾಣ ಪತ್ರಗಳನ್ನು ನೀಡುವ ಮೂಲಕ ನೆರವೇರಬಹುದಾದಂಥ ಸೇವೆಗಳನ್ನು ನೆರವೇರಿಸುವುದಾಗಿ ಒಪ್ಪಿಕೊಳ್ಳುವಾಗ ಅಥವಾ ನೆರವೇರಿಸುವಾಗ ; ಅಥವಾ

(ಡಿ) ವೃತ್ತಿಯಲ್ಲಿ ಕಂಪನಿ ಕಾರ್ಯದರ್ಶಿಯೆಂದು ಸಾರ್ವಜನಿಕರಿಗೆ ತಿಳಿಸುವಾಗ ; ಅಥವಾ

(ಇ) ಕಂಪನಿ ಕಾರ್ಯದರ್ಶಿಗಳ ವೃತ್ತಿಯ ವ್ಯವಹರಣೆಗೆ ಸಂಬಂಧಿಸಿದಂತೆ ತತ್ವದ ಅಥವಾ ವಿವರಗಳ ವಿಷಯಗಳಿಗೆ ಸಂಬಂಧಿಸಿದ ವೃತ್ತಿ ಸೇವೆಗಳನ್ನು ಸಲ್ಲಿಸುವಾಗ ಅಥವಾ ಸಹಾಯವನ್ನು ಮಾಡುವಾಗ ; ಅಥವಾ

(ಎಫ್) ಪರಿಷತ್ತಿನ ಅಭಿಪ್ರಾಯದಲ್ಲಿ ಕಂಪನಿ ಕಾರ್ಯದರ್ಶಿಯು ವೃತ್ತಿಯಲ್ಲಿ ಸಲ್ಲಿಸುವ ಅಥವಾ ಸಲ್ಲಿಸಬಹುದಾದಂಥ ಇತರ ಸೇವೆಗಳನ್ನು ಸಲ್ಲಿಸುವಾಗ

- "ವೃತ್ತಿಯಲ್ಲಿ ಇರುವನೆಂದು" ಭಾವಿಸತಕ್ಕುದು ಮತ್ತು "ವೃತ್ತಿಯಲ್ಲಿ ಇರುವ" ಎಂಬ ಪದಗಳನ್ನು ಅವುಗಳ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತಿಯ ಪದಾವಳಿಗನುಸಾರ ಅರ್ಥೈಸತಕ್ಕುದು.

## ಅಧ್ಯಾಯ – II

## ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ

**3. ಸಂಸ್ಥೆಯ ನಿಗಮನ.**– (1) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ವಿಸರ್ಜಿತ ಕಂಪನಿಯ ರಿಜಿಸ್ಟರಿನಲ್ಲಿ ಯಾರ ಹೆಸರುಗಳು ನಮೂದಾಗಿವೆಯೋ ಆ ಎಲ್ಲಾ ವ್ಯಕ್ತಿಗಳು ಮತ್ತು ಈ ಅಧಿನಿಯಮದ ಮೇರೆಗೆ ನಿರ್ವಹಿಸತಕ್ಕ ರಿಜಿಸ್ಟರಿನಲ್ಲಿ ಇನ್ನು ಮುಂದೆ ಯಾವ ವ್ಯಕ್ತಿಗಳು ತಮ್ಮ ಹೆಸರುಗಳನ್ನು ನಮೂದಿಸಿಕೊಳ್ಳಬಹುದೋ ಆ ಎಲ್ಲಾ ವ್ಯಕ್ತಿಗಳು, ಈ ಅಧಿನಿಯಮದ ಮೇರೆಗೆ ನಿರ್ವಹಿಸಲಾಗುವ ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಮುಂದುವರಿಸಿಕೊಂಡು ಹೋಗುವವರೆಗೆ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯೆಂಬ ಹೆಸರಿನಿಂದ ಈ ಮೂಲಕ ನಿಗಮಿತ ನಿಕಾಯವಾಗುತ್ತಾರೆ ಮತ್ತು ಅಂಥ ಎಲ್ಲಾ ವ್ಯಕ್ತಿಗಳನ್ನು ಸಂಸ್ಥೆಯ ಸದಸ್ಯರೆಂದು ತಿಳಿಯತಕ್ಕುದು.

(2) ಸಂಸ್ಥೆಯು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕುದು ಮತ್ತು ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಅದು ತನ್ನ ಹೆಸರಿನಲ್ಲಿ ದಾವೆ ಹೂಡತಕ್ಕುದು ಅಥವಾ ದಾವೆಗೆ ಗುರಿಯಾಗತಕ್ಕುದು.

**4. ರಿಜಿಸ್ಟರಿನಲ್ಲಿ ಹೆಸರುಗಳನ್ನು ನಮೂದಿಸುವುದು.** – (1) ಈ ಕೆಳಕಂಡ ವ್ಯಕ್ತಿಗಳ ಪೈಕಿ ಯಾವನೇ ವ್ಯಕ್ತಿಯು, ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು, ಎಂದರೆ:–

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ವಿಸರ್ಜಿತ ಕಂಪನಿಯ (ಗೌರವ ಅಧಿಸದಸ್ಯನು ಸೇರಿ) ಸಹವರ್ತಿ ಸದಸ್ಯ ಅಥವಾ ಅಧಿಸದಸ್ಯನಾಗಿದ್ದ ಯಾವನೇ ವ್ಯಕ್ತಿ;

(ಬಿ) ಭಾರತ ಸರ್ಕಾರದಿಂದ ಪಡೆದ ಡಿಪ್ಲೋಮಾ ಇನ್ ಕಂಪನಿ ಸೆಕ್ರೆಟರಿಶಿಪ್ ಅನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿ ;

(ಸಿ) ಭಾರತದ ಖಾಯಂ ನಿವಾಸಿಯಲ್ಲದ ಯಾವನೇ ವ್ಯಕ್ತಿಯನ್ನು ಹೊರತುಪಡಿಸಿ, ವಿಸರ್ಜಿತ ಕಂಪನಿಯು ನಡೆಸಿದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಮತ್ತು ವಿಸರ್ಜಿತ ಕಂಪನಿಯು ನಿರ್ದಿಷ್ಟಪಡಿಸಿದ ಅಥವಾ ಪರಿಷತ್ತು ನಿಯಮಿಸಿದ ತರಬೇತಿಯನ್ನು ಪೂರ್ಣಗೊಳಿಸಿರುವ ಯಾವನೇ ವ್ಯಕ್ತಿ ;

(ಡಿ) ಸಂಸ್ಥೆಯ ಸದಸ್ಯತ್ವಕ್ಕಾಗಿ ನಿಯಮಿಸಬಹುದಾದಂಥ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಮತ್ತು ಅಂಥ ತರಬೇತಿಯನ್ನು ಪೂರ್ಣಗೊಳಿಸಿರುವ ಯಾವನೇ ವ್ಯಕ್ತಿ ;

(ಇ) ಸಂಸ್ಥೆಯ ಸದಸ್ಯತ್ವಕ್ಕೆ ಈ ಅಧಿನಿಯಮದ ಮೇರೆಗೆ ನಿಯಮಿಸಲಾದ ಪರೀಕ್ಷೆಗೆ ಮತ್ತು ತರಬೇತಿಗೆ ಸಮಾನವೆಂದು ಕೇಂದ್ರ ಸರ್ಕಾರವು ಅಥವಾ ಪರಿಷತ್ತು ಮಾನ್ಯ ಮಾಡಿದಂಥ ಭಾರತದ ಹೊರಗಿನ ಇತರ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಮತ್ತು ಇತರ ತರಬೇತಿಯನ್ನು ಪೂರ್ಣಗೊಳಿಸಿರುವ ಯಾವನೇ ವ್ಯಕ್ತಿ :

ಪರಂತು, ಈ ಉಪ-ಪ್ರಕರಣದಲ್ಲಿ ನಮೂದಿಸಿದ ವರ್ಗಗಳ ಪೈಕಿ ಯಾವುದೇ ವರ್ಗಕ್ಕೆ ಸೇರಿದ ಮತ್ತು ಭಾರತದಲ್ಲಿ ಖಾಯಂ ನಿವಾಸಿಯಾಗಿಲ್ಲದಿರುವ ಯಾವನೇ ವ್ಯಕ್ತಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಥವಾ ಪರಿಷತ್ತು, ಸಾರ್ವಜನಿಕ ಹಿತದೃಷ್ಟಿಯಿಂದ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸಬಹುದಾದಂಥ ಹೆಚ್ಚಿನ ಷರತ್ತುಗಳನ್ನು ವಿಧಿಸಬಹುದು.

(2) (1) ನೇ ಉಪ-ಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಮೂದಿಸಿದ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು ಯಾವುದೇ ಪ್ರವೇಶ ಫೀಜನ್ನು ಸಂದಾಯ ಮಾಡದೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳತಕ್ಕುದು.

(3) (1) ನೇ ಉಪ-ಪ್ರಕರಣದ (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಮೂದಿಸಿದ ವರ್ಗಗಳ ಪೈಕಿ ಯಾವುದೇ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ಅದನ್ನು ಮಂಜೂರು ಮಾಡಿದ ತರುವಾಯ ಯಾವುದೇ ಸಂದರ್ಭದಲ್ಲಿ

ನಾಲ್ಕು ನೂರು ರೂಪಾಯಿಗಳಿಗೆ ಮೀರದಂತೆ ನಿಯಮಿಸಿದ ಪ್ರವೇಶ ಫೀಜನ್ನು ಸಂದಾಯ ಮಾಡಿದ ಮೇಲೆ ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳತಕ್ಕುದು.

(4) ಕೇಂದ್ರ ಸರ್ಕಾರವು, (1)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಮೂದಿಸಿದ ವರ್ಗಗಳಿಗೆ ಸೇರಿದ ಎಲ್ಲಾ ವ್ಯಕ್ತಿಗಳ ಹೆಸರುಗಳನ್ನು ಈ ಅಧಿನಿಯಮದ ಪ್ರಾರಂಭಕ್ಕೆ ರಿಜಿಸ್ಟರಿನಲ್ಲಿ ನಮೂದಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(5) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ವ್ಯಕ್ತಿಯು ಕಂಪನಿ ಕಾರ್ಯದರ್ಶಿಗಳ ವೃತ್ತಿಗೆ ಮಹತ್ವದ ಕೊಡುಗೆ ಸಲ್ಲಿಸಿರುವನೆಂದು ಪರಿಷತ್ತು ಅಭಿಪ್ರಾಯಪಟ್ಟರೆ, ಅದು ಅಂಥ ವ್ಯಕ್ತಿಗೆ ಗೌರವ ಅಧಿಸದಸ್ಯತ್ವವನ್ನು ಪ್ರದಾನ ಮಾಡಬಹುದು ಮತ್ತು ಆ ತರುವಾಯ, ಪರಿಷತ್ತು ರಿಜಿಸ್ಟರಿನಲ್ಲಿ ಅಂಥ ವ್ಯಕ್ತಿಯ ಹೆಸರನ್ನು ನಮೂದಿಸತಕ್ಕುದು. ಆದರೆ ಅಂಥ ವ್ಯಕ್ತಿಯು ಸಂಸ್ಥೆಯ ಯಾವುದೇ ಚುನಾವಣೆಯಲ್ಲಿ ಅಥವಾ ಸಭೆಗಳಲ್ಲಿ ಯಾವುದೇ ಮತದಾನದ ಹಕ್ಕನ್ನು ಹೊಂದಿರತಕ್ಕುದಲ್ಲ ಮತ್ತು ಸಂಸ್ಥೆಗೆ ಯಾವುದೇ ಫೀಜನ್ನು ಸಂದಾಯ ಮಾಡುವಂತೆ ಸಹ ಅವನನ್ನು ಅಗತ್ಯಪಡಿಸತಕ್ಕುದಲ್ಲ.

**5. ಸಹವರ್ತಿ ಸದಸ್ಯರು ಮತ್ತು ಅಧಿಸದಸ್ಯರು.** – (1) ಸಂಸ್ಥೆಯ ಸದಸ್ಯರನ್ನು ಕ್ರಮವಾಗಿ ಸಹವರ್ತಿ ಸದಸ್ಯರು ಮತ್ತು ಅಧಿಸದಸ್ಯರೆಂದು ಕರೆಯಲಾಗುವ ಎರಡು ವರ್ಗಗಳನ್ನಾಗಿ ವಿಭಾಗಿಸತಕ್ಕುದು.

(2) (4)ನೇ ಉಪ-ಪ್ರಕರಣದ ಉಪಬಂಧಗಳು ಅನ್ವಯಿಸುವ ವ್ಯಕ್ತಿಯ ಹೊರತಾದ ಯಾವನೇ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸಿದ ಮೇಲೆ, ಅವನು ಸಹವರ್ತಿ ಸದಸ್ಯನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನ ಹೆಸರು ಹಾಗೆ ನಮೂದಾಗಿರುವವರೆಗೆ ಅವನು ಸಹವರ್ತಿ ಸದಸ್ಯನೆಂದು ಸೂಚಿಸಲು ತನ್ನ ಹೆಸರಿನ ತರುವಾಯ "ಎ.ಸಿ.ಎಸ್." ಅಕ್ಷರಗಳನ್ನು ಬಳಸಲು ಹಕ್ಕುಳ್ಳವನಾಗಿರತಕ್ಕುದು.

(3) ಸಹವರ್ತಿ ಸದಸ್ಯನಾಗಿದ್ದು ಕಂಪನಿ ಕಾರ್ಯದರ್ಶಿಯಾಗಿ ಕೊನೆ ಪಕ್ಷ ನಿರಂತರ ಐದು ವರ್ಷಗಳವರೆಗೆ ಭಾರತದಲ್ಲಿ ವೃತ್ತಿಯಲ್ಲಿದ್ದ ವ್ಯಕ್ತಿಯು, ಮತ್ತು ಯಾವ ವ್ಯಕ್ತಿಯು ಐದು ವರ್ಷಗಳಿಗಿಂತ ಕಡಿಮೆ ಇಲ್ಲದ ನಿರಂತರ ಅವಧಿಯವರೆಗೆ ಸಹವರ್ತಿ ಸದಸ್ಯನಾಗಿರುವನೋ ಮತ್ತು ಕಂಪನಿಯ ಕಾರ್ಯದರ್ಶಿಯಾಗಿ ಐದು ವರ್ಷಗಳ ಅವಧಿಯ ನಿರಂತರ ವೃತ್ತಿಯಲ್ಲಿದ್ದ ಪರಿಣಾಮವಾಗಿ ಸಾಮಾನ್ಯವಾಗಿ ಆರ್ಜಿಸಿದ ಅನುಭವಕ್ಕೆ ಸಮಾನವಾದ ಅನುಭವವನ್ನು ಆ ವ್ಯಕ್ತಿಯು ಹೊಂದಿರುವನೆಂದು ಖಚಿತ ಪಡಿಸಿಕೊಳ್ಳುವ ದೃಷ್ಟಿಯಿಂದ ಪರಿಷತ್ತು ನೇಮಿಸಬಹುದಾದಂಥ ಅರ್ಹತೆಗಳು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವನೋ ಆ ವ್ಯಕ್ತಿಯು ಯಾವುದೇ ಸಂದರ್ಭದಲ್ಲಿ ನಾಲ್ಕು ನೂರು ರೂಪಾಯಿಗಳಿಗೆ ಮೀರದ ನಿಯಮಿಸಿದ ಪ್ರವೇಶ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ನಿಯಮಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ತರುವಾಯ ಮತ್ತು ಅದನ್ನು ಮಂಜೂರು ಮಾಡಿದ ಮೇಲೆ ಅವನನ್ನು ರಿಜಿಸ್ಟರಿನಲ್ಲಿ ಅಧಿಸದಸ್ಯನಾಗಿ ನಮೂದಿಸತಕ್ಕುದು.

**ವಿವರಣೆ I:** – ಯಾವುದೇ ಅವಧಿಯವರೆಗೆ 6ನೇ ಪ್ರಕರಣದ ಮೇರೆಗಿನ ವೃತ್ತಿ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯು, ಆ ಅವಧಿಯಲ್ಲಿ ಅವನು ವಾಸ್ತವವಾಗಿ ವೃತ್ತಿಯನ್ನು ನಡೆಸದೆ ಇದ್ದಾಗ್ಯೂ, ಈ ಉಪ ಪ್ರಕರಣದ ಉದ್ದೇಶಗಳಿಗಾಗಿ ಭಾರತದಲ್ಲಿ ಆ ಅವಧಿಯಲ್ಲಿ ವೃತ್ತಿ ನಡೆಸುತ್ತಿದ್ದನೆಂದು ಭಾವಿಸತಕ್ಕುದು.

**ವಿವರಣೆ II:** – ಒಬ್ಬ ವ್ಯಕ್ತಿಯು ಸಂಸ್ಥೆಯ ಸಹವರ್ತಿ ಸದಸ್ಯನಾಗಿದ್ದ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಆ ವ್ಯಕ್ತಿಯು ಸಂಸ್ಥೆಯ ಸಹವರ್ತಿ ಸದಸ್ಯನಾಗುವುದಕ್ಕೆ ನಿಕಟಪೂರ್ವದಲ್ಲಿ ಅವನು ವಿಸರ್ಜಿತ ಕಂಪನಿಯ ಸಹವರ್ತಿಯಾಗಿದ್ದ ಯಾವುದೇ ನಿರಂತರ ಅವಧಿಯನ್ನು ಸೇರಿಸಿಕೊಳ್ಳತಕ್ಕುದು.

(4) ವಿಸರ್ಜಿತ ಕಂಪನಿಯ ಅಧಿಸದಸ್ಯನಾಗಿದ್ದ ಮತ್ತು 4ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರುವ ಯಾವನೇ ವ್ಯಕ್ತಿಯ ಹೆಸರನ್ನು ಅಧಿಸದಸ್ಯನಾಗಿ ರಿಜಿಸ್ಟರಿನಲ್ಲಿ ನಮೂದಿಸತಕ್ಕುದು.

(5) ಅಧಿಸದಸ್ಯನಾಗಿ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಯಾವನೇ ವ್ಯಕ್ತಿಯು, ಅವನ ಹೆಸರು ಹಾಗೆ ನಮೂದಾಗಿರುವವರೆಗೆ ತಾನು ಅಧಿಸದಸ್ಯನೆಂದು ಸೂಚಿಸಲು ತನ್ನ ಹೆಸರಿನ ತರುವಾಯ "ಎಫ್.ಸಿ.ಎಸ್." ಎಂಬ ಅಕ್ಷರಗಳನ್ನು ಬಳಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು.

**6. ವೃತ್ತಿ ಪ್ರಮಾಣಪತ್ರ** .- (1) ಸಂಸ್ಥೆಯ ಯಾವನೇ ಸದಸ್ಯನು ಪರಿಷತ್ತಿನಿಂದ ವೃತ್ತಿ ಪ್ರಮಾಣ ಪತ್ರವನ್ನು ಪಡೆದಿರುವ ಹೊರತು , ಅವನು ಭಾರತದಲ್ಲಾಗಲಿ ಅಥವಾ ಬೇರೆಡೆಯಲ್ಲಾಗಲಿ ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗಿರತಕ್ಕುದಲ್ಲ.

(2) ವೃತ್ತಿ ನಡೆಸಲು ಹಕ್ಕುಳ್ಳವನಾಗಬೇಕೆಂದು ಇಚ್ಛಿಸುವ ಸದಸ್ಯನು ತನ್ನ ಪ್ರಮಾಣಪತ್ರಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕುದು ಮತ್ತು ನಿಯಮಿಸಬಹುದಾದಂಥ ವಾರ್ಷಿಕ ಫೀಜನ್ನು ಸಂದಾಯಮಾಡತಕ್ಕುದು ಮತ್ತು ಆ ಫೀಜು ಯಾವುದೇ ಸಂದರ್ಭದಲ್ಲಿ ಎರಡು ನೂರು ರೂಪಾಯಿಗಳನ್ನು ಮೀರತಕ್ಕುದಲ್ಲ ಮತ್ತು ಅದನ್ನು ಪ್ರತಿವರ್ಷದ ಏಪ್ರಿಲ್ 1ನೇ ದಿನದಂದು ಅಥವಾ ಅದಕ್ಕೆ ಮುಂಚೆ ಸಂದಾಯಮಾಡತಕ್ಕುದು.

**7. ಸದಸ್ಯರನ್ನು ಕಂಪನಿ ಕಾರ್ಯದರ್ಶಿಗಳೆಂದು ಕರೆಯುವುದು.**- ವೃತ್ತಿಯಲ್ಲಿರುವ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು ಕಂಪನಿ ಕಾರ್ಯದರ್ಶಿಯೆಂಬ ಪದನಾಮವನ್ನು ಉಪಯೋಗಿಸತಕ್ಕುದು ಮತ್ತು ಯಾವನೇ ಇತರ ಸದಸ್ಯನು ಆ ಪದನಾಮವನ್ನು ಉಪಯೋಗಿಸಬಹುದು ಮತ್ತು ಅಂಥ ಪದನಾಮ ಉಪಯೋಗಿಸುವ ಯಾವನೇ ಸದಸ್ಯನು ಅದಕ್ಕೆ ಹೆಚ್ಚುವರಿಯಾಗಿ ಇಲ್ಲವೆ ಅದರ ಬದಲಾಗಿ ಯಾವುದೇ ಇತರ ವಿವರಣೆಯನ್ನು ಉಪಯೋಗಿಸತಕ್ಕುದಲ್ಲ :

ಪರಂತು, ಪರಿಷತ್ತಿನಿಂದ ಈ ಸಂಬಂಧವಾಗಿ ಮನ್ನಣೆ ಪಡೆಯಬಹುದಾದಂಥ, ಭಾರತದಲ್ಲಾಗಲಿ ಅಥವಾ ಬೇರೆಡೆಯಲ್ಲಾಗಲೀ ಇರುವಂಥ ಇತರ ಸಂಸ್ಥೆಯ ಸದಸ್ಯತ್ವವನ್ನು ಸೂಚಿಸಲು ಅವನ ಹೆಸರಿಗೆ ಯಾವುದೇ ಇತರ ವಿವರಣೆಯನ್ನು ಅಥವಾ ಅಕ್ಷರಗಳನ್ನು ಅಥವಾ ಅವನು ಹೊಂದಿರಬಹುದಾದ ಯಾವುದೇ ಇತರ ಅರ್ಹತೆಯನ್ನು ಅವುಗಳಿಗೆ ಅವನು ಹಕ್ಕುಳ್ಳವನಾಗಿ ಸೇರಿಸಿಕೊಳ್ಳದಂತೆ ಅಥವಾ ಯಾವ ಫರ್ಮಿನ ಎಲ್ಲ ಪಾಲುಗಾರರು ಸಂಸ್ಥೆಯ ಸದಸ್ಯರಾಗಿರುವರೋ ಮತ್ತು ವೃತ್ತಿಯಲ್ಲಿರುವರೋ ಆ ಫರ್ಮನ್ನು ಕಂಪನಿ ಕಾರ್ಯದರ್ಶಿಗಳೆಂದು ಆ ಫರ್ಮಿನ ಹೆಸರಿನಲ್ಲಿ ಕರೆಯದಂತೆ ಈ ಉಪ ಪ್ರಕರಣದಲ್ಲಿರುವುದಾವುದೂ, ನಿಷೇಧಿಸುವುದಾಗಿ ಭಾವಿಸತಕ್ಕುದಲ್ಲ.

**8. ಅಸಮರ್ಥತೆಗಳು.**- 4ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ವ್ಯಕ್ತಿಯು,-

(ಎ) ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳುವ ಸಲುವಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಅವನಿಗೆ ಇಪ್ಪತ್ತೊಂದು ವರ್ಷ ವಯಸ್ಸು ಆಗಿರದಿದ್ದರೆ ; ಅಥವಾ

(ಬಿ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ನಿರ್ಣೀತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ವಿಮುಕ್ತ ದಿವಾಳಿಯಾಗಿದ್ದು, ಅವನ ದಿವಾಳಿತನವು ದುರಾದೃಷ್ಟದಿಂದ ಆಗಿದ್ದು, ಅವನ ಯಾವುದೇ ದುರ್ನಡತೆಯಿಂದ ಆದುದಲ್ಲವೆಂಬುದಾಗಿ ನ್ಯಾಯಾಲಯದಿಂದ ಪ್ರಮಾಣಪತ್ರವನ್ನು ಪಡೆಯದಿದ್ದರೆ; ಅಥವಾ

(ಇ) ಭಾರತದಲ್ಲಿ ಅಥವಾ ಹೊರಗಡೆ ನೈತಿಕ ಅಧಃಪತನವನ್ನೊಳಗೊಂಡ ಮತ್ತು ಕಾರಾವಾಸದಿಂದ ದಂಡನೀಯವಾದ ಅಪರಾಧದ ಬಗ್ಗೆ ಅಥವಾ ತನ್ನ ವೃತ್ತಿ ಸಾಮರ್ಥ್ಯದಲ್ಲಿ ಎಸಗಿದ ತಾಂತ್ರಿಕ ಸ್ವರೂಪದ್ದಲ್ಲದ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದು ಹಾಗೆ ಎಸಗಲಾದ ಅಪರಾಧದ ಸಂಬಂಧದಲ್ಲಿ ಕ್ಷಮಾದಾನವನ್ನು ಪಡೆದಿರದಿದ್ದರೆ ಅಥವಾ ಈ ಸಂಬಂಧದಲ್ಲಿ ಅವನು ಸಲ್ಲಿಸಿದ ಅರ್ಜಿಯ ಮೇಲೆ ಕೇಂದ್ರ ಸರ್ಕಾರವು ಲಿಖಿತ ಆದೇಶದ ಮೂಲಕ ಆ ಅಸಮರ್ಥತೆಯನ್ನು ತೆಗೆದುಹಾಕಿರದಿದ್ದರೆ; ಅಥವಾ

(ಎಫ್) ವೃತ್ತಿ ಸಂಬಂಧವಾದ ಅಥವಾ ಇತರ ದುರ್ನಡತೆಯ ಬಗ್ಗೆ ತಪ್ಪಿತಸ್ಥನೆಂದು ವಿಚಾರಣೆಯಲ್ಲಿ ಕಂಡುಬಂದ ಮೇಲೆ ಸಂಸ್ಥೆಯ ಸದಸ್ಯತ್ವದಿಂದ ಅವನನ್ನು ತೆಗೆದುಹಾಕಿದ್ದರೆ

- ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದು ಮಾಡಿಸಿಕೊಳ್ಳಲು ಅಥವಾ ಇರಿಸಿಕೊಳ್ಳಲು ಹಕ್ಕುಳ್ಳವನಾಗತಕ್ಕುದಲ್ಲ:

ಪರಂತು, ನಿರ್ದಿಷ್ಟ ಅವಧಿಯವರೆಗೆ ಸದಸ್ಯತ್ವದಿಂದ ತೆಗೆದುಹಾಕಲಾದ ವ್ಯಕ್ತಿಯು ಅಂಥ ಅವಧಿಯು ಮುಕ್ತಾಯವಾಗುವವರೆಗೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದು ಮಾಡಿಸಿಕೊಳ್ಳಲು ಹಕ್ಕುಳ್ಳವನಾಗತಕ್ಕುದಲ್ಲ.

## ಅಧ್ಯಾಯ -III

## ಸಂಸ್ಥೆಯ ಪರಿಷತ್ತು

**9. ಸಂಸ್ಥೆಯ ಪರಿಷತ್ತಿನ ರಚನೆ.-** (1) ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಗೆ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದಕ್ಕೆ ವಹಿಸಿದ ಪ್ರಕಾರ್ಯಗಳ ನಿರ್ವಹಣೆಗೆ ಸಂಸ್ಥೆಯ ಒಂದು ಪರಿಷತ್ತು ಇರತಕ್ಕುದು.

(2) ಪರಿಷತ್ತು,-

(ಎ) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಈ ಸಂಬಂಧವಾಗಿ ಅಧಿಸೂಚಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಾದೇಶಿಕ ಕ್ಷೇತ್ರಗಳಿಂದ ಅಧಿಸದಸ್ಯರುಗಳೊಳಗಿಂದ ಸಂಸ್ಥೆಯ ಸದಸ್ಯರುಗಳ ಮೂಲಕ ಆಯ್ಕೆಗೊಂಡ ಹನ್ನೆರಡಕ್ಕೆ ಹೆಚ್ಚಿಲ್ಲದಷ್ಟು ವ್ಯಕ್ತಿಗಳನ್ನು ; ಮತ್ತು

(ಬಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿದ ನಾಲ್ಕಕ್ಕೆ ಹೆಚ್ಚಿಲ್ಲದಷ್ಟು ವ್ಯಕ್ತಿಗಳನ್ನು ಒಳಗೊಂಡಿರತಕ್ಕುದು.

**10. ಪರಿಷತ್ತಿನ ಚುನಾವಣೆಯ ವಿಧಾನ.-** (1) 9ನೆಯ ಪ್ರಕರಣದ (2) ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಚುನಾವಣೆಗಳನ್ನು ನಿಯಮಿಸಿದ ರೀತಿಯಲ್ಲಿ ನಡೆಸತಕ್ಕುದು.

(2) ಯಾವುದೇ ಅಂಥ ಚುನಾವಣೆಯ ಸಂಬಂಧದಲ್ಲಿ ಯಾವುದೇ ವಿವಾದವುಂಟಾದಾಗ, ಪರಿಷತ್ತು ಆ ವಿಷಯವನ್ನು ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನೇಮಕಮಾಡಿದ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕುದು ಮತ್ತು ಅಂಥ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕುದು:

ಪರಂತು, ಚುನಾವಣೆಯ ಫಲಿತಾಂಶದ ಘೋಷಣೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಬಾಧಿತ ಪಕ್ಷಕಾರನು ಪರಿಷತ್ತಿಗೆ ಆ ಬಗ್ಗೆ ಅರ್ಜಿ ಸಲ್ಲಿಸಿದ ಹೊರತು ಅದನ್ನು ಹಾಗೆ ಕಳುಹಿಸಿಕೊಡತಕ್ಕುದಲ್ಲ.

(3) ಪರಿಷತ್ತು ನ್ಯಾಯಾಧಿಕರಣದ ವೆಚ್ಚಗಳನ್ನು ಭರಿಸತಕ್ಕುದು.

(4) ಈ ಪ್ರಕರಣದಲ್ಲಿ ಮತ್ತು ಅಧ್ಯಾಯ ಖಫಿರಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಿಸರ್ಜಿತ ಕಂಪನಿಯ ಪರಿಷತ್ತು ಈ ಅಧಿನಿಯಮದ ಪ್ರಾರಂಭದ ತರುವಾಯ ಸಂಸ್ಥೆಯ ಪರಿಷತ್ತು ಆಗತಕ್ಕುದು, ಮತ್ತು

(i) ಅಂಥ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯವರೆಗೆ; ಅಥವಾ

(ii) 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರ ಪರಿಷತ್ತನ್ನು ರಚಿಸುವವರೆಗೆ-

- ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹಾಗೆ ಕಾರ್ಯ ನಿರ್ವಹಿಸತಕ್ಕುದು.

**ವಿವರಣೆ:-** ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ ಪರಿಷತ್ತನ್ನು, 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ದಿನಾಂಕದಿಂದ, ಎಂದರೆ ಸದರಿ (2)ನೇ ಉಪ-ಪ್ರಕರಣದ (ಎ) ಖಂಡದ

ಮೇರೆಗೆ ಮೊದಲ ಚುನಾವಣೆಯ ಫಲಿತಾಂಶದ ದಿವಸದಿಂದ ಮೂವತ್ತು ದಿವಸಗಳಿಗಿಂತ ತಡವಾಗಿಯಲ್ಲದ ದಿನಾಂಕದಿಂದ, ಜಾರಿಗೆ ಬರುವಂತೆ ರಚಿಸಲಾಗಿದೆ ಎಂದು ಭಾವಿಸತಕ್ಕದ್ದು.

**11. ಚುನಾವಣೆ ತಪ್ಪಿದಲ್ಲಿ ನಾಮನಿರ್ದೇಶನ.**- ಸಂಸ್ಥೆಯ ಸದಸ್ಯರು, 9ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ ) ಖಂಡದ ಮೇರೆಗೆ ಅಧಿಸೂಚಿಸಬಹುದಾದ ಯಾವುದೇ ಪ್ರಾದೇಶಿಕ ಕ್ಷೇತ್ರದಿಂದ ಆ ಖಂಡದ ಮೇರೆಗೆ ಯಾವನೇ ಸದಸ್ಯನನ್ನು ಆಯ್ಕೆ ಮಾಡಲು ತಪ್ಪಿದರೆ, ಕೇಂದ್ರ ಸರ್ಕಾರವು, ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಅಂಥ ಕ್ಷೇತ್ರದಿಂದ ಕ್ರಮಬದ್ಧವಾಗಿ ಅರ್ಹನಾದ ಯಾವನೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತನಾದ ಯಾವನೇ ವ್ಯಕ್ತಿಯನ್ನು ಕ್ರಮಬದ್ಧವಾಗಿ ಆಯ್ಕೆಯಾದ ಪರಿಷತ್ತಿನ ಸದಸ್ಯನೆಂಬುದಾಗಿ ಭಾವಿಸತಕ್ಕುದು.

**12. ಅಧ್ಯಕ್ಷ ಮತ್ತು ಉಪಾಧ್ಯಕ್ಷ.** - (1) ಪರಿಷತ್ತು ತನ್ನ ಮೊದಲ ಸಭೆಯಲ್ಲಿ ತನ್ನ ಸದಸ್ಯರಲ್ಲಿ ಇಬ್ಬರನ್ನು ಕ್ರಮವಾಗಿ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡತಕ್ಕುದು ಮತ್ತು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಸ್ಥಾನವು ತೆರವಾದಾಗಲೆಲ್ಲ ಸಂದರ್ಭಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿರಲು ಪರಿಷತ್ತು ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡತಕ್ಕುದು:

ಪರಂತು, ಈ ಅಧಿನಿಯಮದ ಪ್ರಾರಂಭದ ತರುವಾಯ ಈ ಉಪ-ಪ್ರಕರಣದ ಉಪಬಂಧಗಳ ಮೇರೆಗೆ ಅಧ್ಯಕ್ಷನು ಆಯ್ಕೆಗೊಳ್ಳುವ ಸಮಯದವರೆಗೆ ವಿಸರ್ಜಿತ ಕಂಪನಿಯ ಪರಿಷತ್ತಿನ ಅಧ್ಯಕ್ಷನು ಹಾಗೆ ಅಧ್ಯಕ್ಷನಾಗಿ ಪದಧಾರಣ ಮಾಡಿರುವುದು ಮುಂದುವರಿಯತಕ್ಕುದು.

(2) ಅಧ್ಯಕ್ಷನು ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರಿಯಾಗಿರತಕ್ಕುದು.

(3) ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ತಾನು ಆಯ್ಕೆಯಾದ ದಿವಸದಿಂದ ಒಂದು ವರ್ಷದ ಅವಧಿಯವರೆಗೆ ಪದಧಾರಣ ಮಾಡತಕ್ಕದು. ಆದರೆ ಆ ಅವಧಿಯು ಪರಿಷತ್ತಿನ ಸದಸ್ಯನಾಗಿ ಆತನಿಗಿರುವ ಪದಾವಧಿಯನ್ನು ಮೀರಿರತಕ್ಕುದಲ್ಲ ಮತ್ತು ಸಂಬಂಧಪಟ್ಟ ಕಾಲದಲ್ಲಿ ಅವನು ಪರಿಷತ್ತಿನ ಸದಸ್ಯನಾಗಿರುವುದಕ್ಕೆ ಒಳಪಟ್ಟು, ಅವನು ಮರುಚುನಾವಣೆಗೆ ಹಕ್ಕುಳ್ಳವನಾಗತಕ್ಕುದು.

(4) ಪರಿಷತ್ತಿನ ಅವಧಿಯು ಅಥವಾ ಅದರ ಅಧ್ಯಕ್ಷನ ಪದಾವಧಿಯು ಮುಕ್ತಾಯವಾದ ತರುವಾಯ, ಅಧ್ಯಕ್ಷನು, ಹೊಸ ಅಧ್ಯಕ್ಷನು ಆಯ್ಕೆಗೊಂಡು ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರಿಯತಕ್ಕುದು.

(5) ಅಧ್ಯಕ್ಷನ ಪದದಲ್ಲಿ ಯಾವುದೇ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ, ಈ ಪ್ರಕರಣದ ಉಪಬಂಧಗಳಿಗನುಸಾರ ಅಂಥ ಖಾಲಿ ಸ್ಥಾನವನ್ನು ಭರ್ತಿಮಾಡಲು ಆಯ್ಕೆಯಾದ ಹೊಸ ಅಧ್ಯಕ್ಷನು ಅಧಿಕಾರ ವಹಿಸಿಕೊಳ್ಳುವವರೆಗೆ ಉಪಾಧ್ಯಕ್ಷನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕುದು ಮತ್ತು ಅಧ್ಯಕ್ಷನು ಗೈರುಹಾಜರಿ, ಅನಾರೋಗ್ಯ, ಅಥವಾ ಇತರ ಕಾರಣದಿಂದ ತನ್ನ ಕಾರ್ಯನಿರ್ವಹಣೆಗೆ ಅಸಮರ್ಥನಾಗಿರುವಾಗ, ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವವರೆಗೆ ಉಪಾಧ್ಯಕ್ಷನು, ಅವನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

**13. ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು ಮತ್ತು ಆಕಸ್ಮಿಕವಾಗಿ ಸ್ಥಾನಗಳು ಖಾಲಿಯಾಗುವುದು .**- (1) ಪರಿಷತ್ತಿನ ಯಾವನೇ ಸದಸ್ಯನು ಯಾವುದೇ ಸಮಯದಲ್ಲಿ ಅಧ್ಯಕ್ಷನಿಗೆ ಸಂಬೋಧಿಸಿ ಬರೆದ ಪತ್ರಕ್ಕೆ ಸಹಿಹಾಕಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯನ್ನು ರಾಜಪತ್ರದಲ್ಲಿ ಅಧಿಸೂಚಿಸಿದಾಗ ಅಂಥ ಸದಸ್ಯನ ಸ್ಥಾನವು ಖಾಲಿಯಾಗತಕ್ಕುದು.

(2) ಪರಿಷತ್ತಿನ ಯಾವನೇ ಸದಸ್ಯನು, ಪರಿಷತ್ತಿನ ಅಥವಾ ಪರಿಷತ್ತು ರಚಿಸಿದ ಮತ್ತು ಅವನು ಸದಸ್ಯನಾಗಿರುವ ಯಾವುದೇ ಸಮಿತಿಯ ಮೂರು ನಿರಂತರ ಸಭೆಗಳಿಗೆ ಸಾಕಷ್ಟು ಕಾರಣಗಳಿಲ್ಲದೆ ಗೈರುಹಾಜರಾಗಿರುವುದಾಗಿ ಪರಿಷತ್ತು ಘೋಷಿಸಿದರೆ ಅಥವಾ 20ನೇ ಪ್ರಕರಣದ ಉಪಬಂಧಗಳ ಮೇರೆಗೆ ರಿಜಿಸ್ಟರಿನಿಂದ ಯಾವುದೇ ಕಾರಣಕ್ಕಾಗಿ ಅವನ ಹೆಸರನ್ನು ತೆಗೆದುಹಾಕಿದ್ದರೆ, ಅವನು ತನ್ನ ಸ್ಥಾನವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕುದು.

(3) ಪರಿಷತ್ತಿನ ಸದಸ್ಯನ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಸಂದರ್ಭಾನುಸಾರ ಸಂಬಂಧಿಸಿದ ಕ್ಷೇತ್ರದಿಂದ ಹೊಸ ಚುನಾವಣೆಯ ಮೂಲಕ ಅಥವಾ ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕುದು ಮತ್ತು ಆ ಖಾಲಿ

ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಯಾದ ಅಥವಾ ನಾಮ ನಿರ್ದೇಶಿತನಾದ ವ್ಯಕ್ತಿಯು ಪರಿಷತ್ತಿನ ವಿಸರ್ಜನೆಯಾಗುವವರೆಗೆ ಪದಧಾರಣ ಮಾಡತಕ್ಕುದು :

ಪರಂತು, ಪರಿಷತ್ತಿನ ಅವಧಿಯ ಮುಕ್ತಾಯದ ದಿನಾಂಕಕ್ಕೆ ಮೊದಲು ಆರು ತಿಂಗಳೊಳಗೆ ಉಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡಲು ಯಾವುದೇ ಚುನಾವಣೆಯನ್ನು ನಡೆಸತಕ್ಕುದಲ್ಲ , ಆದರೆ ಅಂಥ ಯಾವುದೇ ಖಾಲಿ ಸ್ಥಾನವನ್ನು ಕೇಂದ್ರ ಸರ್ಕಾರವು ಪರಿಷತ್ತಿನ ಅಧ್ಯಕ್ಷನೊಂದಿಗೆ ಸಮಾಲೋಚಿಸಿದ ತರುವಾಯ ನಾಮ ನಿರ್ದೇಶನದ ಮೂಲಕ ಭರ್ತಿ ಮಾಡಬಹುದು.

(4) ಪರಿಷತ್ತಿನಲ್ಲಿ ಉಂಟಾದ ಯಾವುದೇ ಖಾಲಿ ಸ್ಥಾನದ ಅಥವಾ ಪರಿಷತ್ತಿನ ರಚನೆಯಲ್ಲಿರುವ ಯಾವುದೇ ನ್ಯೂನತೆಯ ಆಧಾರದ ಮೇಲೆ ಮಾತ್ರವೇ ಪರಿಷತ್ತು ಮಾಡಿದ ಯಾವ ಕಾರ್ಯವನ್ನೂ ಪ್ರಶ್ನಿಸತಕ್ಕುದಲ್ಲ.

**14. ಪರಿಷತ್ತಿನ ಕಾಲಾವಧಿ ಮತ್ತು ವಿಸರ್ಜನೆ.**- (1) ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಪರಿಷತ್ತಿನ ಕಾಲಾವಧಿಯು ಅದರ ಮೊದಲ ಸಭೆಯ ದಿವಸದಿಂದ ಮೂರು ವರ್ಷಗಳಾಗಿರತಕ್ಕುದು.

(2) ಪರಿಷತ್ತಿನ ಕಾಲಾವಧಿ ಮುಕ್ತಾಯವಾಗಿದ್ದರೂ (ಈ ಉಪಪ್ರಕರಣದಲ್ಲಿ ಇನ್ನು ಮುಂದೆ ಹಿಂದಿನ ಪರಿಷತ್ತು ಎಂದು ಉಲ್ಲೇಖಿಸಲಾಗಿದೆ) ಹಿಂದಿನ ಪರಿಷತ್ತು, ಈ ಅಧಿನಿಯಮದ ಉಪಬಂಧಗಳನುಸಾರ ಹೊಸ ಪರಿಷತ್ತು ರಚನೆಗೊಳ್ಳುವ ತನಕ ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ನಿರ್ವಹಣೆಯನ್ನು ಮುಂದುವರೆಸತಕ್ಕುದು ಮತ್ತು ಅಂಥ ರಚನೆಯ ತರುವಾಯ ಹಿಂದಿನ ಪರಿಷತ್ತು ವಿಸರ್ಜನೆಯಾಗತಕ್ಕುದು.

**15. ಪರಿಷತ್ತಿನ ಪ್ರಕಾರ್ಯಗಳು.**- (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಕರ್ತವ್ಯವು ಪರಿಷತ್ತಿನಲ್ಲಿ ನಿಹಿತವಾಗಿರತಕ್ಕುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪರಿಷತ್ತಿನ ಕರ್ತವ್ಯಗಳು ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕುದು:-

(ಎ) ರಿಜಿಸ್ಟರಿನಲ್ಲಿ ಅಭ್ಯರ್ಥಿಗಳ ಹೆಸರುಗಳ ಸೇರ್ಪಡೆಗೆ ಸಂಬಂಧಪಟ್ಟ ಪರೀಕ್ಷೆಗಳ ಮಾನಕಗಳನ್ನು ನಿಯಮಿಸುವುದು ಮತ್ತು ಆ ಪರೀಕ್ಷೆಗಳನ್ನು ನಡೆಸುವುದು ಹಾಗೂ ಆ ಪರೀಕ್ಷೆಗಳಿಗಾಗಿ ಫೀಜುಗಳನ್ನು ಗೊತ್ತುಪಡಿಸುವುದು ;

(ಬಿ) ವಿದ್ಯಾರ್ಥಿಗಳ ನೋಂದಣಿ ಮತ್ತು ತರಬೇತಿ;

(ಸಿ) ರಿಜಿಸ್ಟರಿನಲ್ಲಿ ನಮೂದನೆಗಾಗಿ ಅರ್ಹತೆಗಳನ್ನು ನಿಯಮಿಸುವುದು ;

(ಡಿ) ಸೇರ್ಪಡೆಯ ಉದ್ದೇಶಗಳಿಗಾಗಿ ವಿದೇಶಿ ಅರ್ಹತೆಗಳಿಗೆ ಮತ್ತು ತರಬೇತಿಗೆ ಮಾನ್ಯತೆ ;

(ಇ) ಈ ಅಧಿನಿಯಮದ ಮೇರೆಗೆ ವೃತ್ತಿ ಪ್ರಮಾಣ ಪತ್ರದ ನೀಡಿಕೆ ಅಥವಾ ನಿರಾಕರಣೆ ;

(ಎಫ್) ಕಂಪನಿ ಕಾರ್ಯದರ್ಶಿಗಳೆಂದು ವೃತ್ತಿ ನಡೆಸುವುದಕ್ಕಾಗಿ ಅರ್ಹರಾದ ವ್ಯಕ್ತಿಗಳ ರಿಜಿಸ್ಟರಿನ ನಿರ್ವಹಣೆ ಮತ್ತು ಪ್ರಕಟಣೆ;

(ಜಿ) ಸದಸ್ಯರು, ಪರೀಕ್ಷಾರ್ಥಿಗಳು ಮತ್ತು ಇತರ ವ್ಯಕ್ತಿಗಳಿಗೆ ಫೀಜುಗಳನ್ನು ವಿಧಿಸುವುದು ಮತ್ತು ಅವುಗಳನ್ನು ಸಂಗ್ರಹಿಸುವುದು;

(ಹೆಚ್) ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು ಮತ್ತು ತೆಗೆದುಹಾಕಲಾದ ಹೆಸರುಗಳನ್ನು ರಿಜಿಸ್ಟರಿಗೆ ಪುನಃ ಸೇರಿಸುವುದು;

(ಐ) ಸಂಸ್ಥೆಯ ಸದಸ್ಯರ ಸ್ಥಾನಮಾನ ಮತ್ತು ವೃತ್ತಿ ಅರ್ಹತೆಗಳ ಮಾನಕಗಳ ವಿನಿಯಮನ ಮತ್ತು ನಿರ್ವಹಣೆ ;

(ಜೆ) ಪರಿಷತ್ತಿನ ಸದಸ್ಯರಲ್ಲದ ಇತರ ವ್ಯಕ್ತಿಗಳಿಗೆ ಹಣಕಾಸು ಸಹಾಯ ನೀಡಿ ಅಥವಾ ಯಾವುದೇ ಇತರ ರೀತಿಯಲ್ಲಿ ನಿಯಮಿಸ ಬಹುದಾದಂತೆ ಕಂಪನಿ ಕಾರ್ಯದರ್ಶಿಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸಂಶೋಧನೆಯನ್ನು ನಡೆಸುವುದು ;

(ಕೆ) ಗ್ರಂಥಾಲಯಗಳನ್ನು ನಿಯಮಿಸಿದ ರೀತಿಯಲ್ಲಿ ನಿರ್ವಹಿಸುವುದು ಮತ್ತು ಕಂಪನಿಗಳ ವ್ಯವಸ್ಥಾಪನೆಯನ್ನು ಮತ್ತು ನಿಯಮಿಸ ಬಹುದಾದಂಥ ಸಂಬಂಧಿತ ವಿಷಯಗಳನ್ನು ಕುರಿತ ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸುವುದು;

(ಎಲ್) ಗೊತ್ತುಪಡಿಸಬಹುದಾದಂತೆ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಿಯಮಿಸಬಹುದಾದಂಥ ಹಣಕಾಸು ಅಥವಾ ಇತರೆ ಸಹಾಯವನ್ನು ನೀಡುವುದು ;

(ಎಂ) ನಿಯಮಿಸಬಹುದಾದಂಥ ಶಿಸ್ತು ಪಾಲನಾ ಅಧಿಕಾರಗಳನ್ನು ಚಲಾಯಿಸುವುದು.

**16. ಸಿಬ್ಬಂದಿ, ಪರಿಶ್ರಮಧನ ಮತ್ತು ಭತ್ಯೆಗಳು.**- (1) ಪರಿಷತ್ತು ತನ್ನ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಸಂಸ್ಥೆಯ ಸದಸ್ಯನಾಗಿರತಕ್ಕ ಒಬ್ಬ ವ್ಯಕ್ತಿಯನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡತಕ್ಕದು ಮತ್ತು ಪರಿಷತ್ತು ,-

(ಎ) ಅದು ಸಂಸ್ಥೆಯ ಸಿಬ್ಬಂದಿಗೆ ತಾನು ಅವಶ್ಯವೆಂದು ಭಾವಿಸುವಂಥ ಇತರ ವ್ಯಕ್ತಿಗಳನ್ನು ನೇಮಕ ಮಾಡಬಹುದು ;

(ಬಿ) ಸಂಸ್ಥೆಯ ಕಾರ್ಯದರ್ಶಿಯ ಮತ್ತು 33ನೇ ಪ್ರಕರಣದ ಮೇರೆಗೆ ಸಂಸ್ಥೆಯಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳೂ ಸೇರಿ ಇತರ ನೌಕರರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ವೇತನ ಶ್ರೇಣಿಗಳನ್ನು ನಿಯಮಿಸಬಹುದು;

(ಸಿ) ಪರಿಷತ್ತಿನ ಮತ್ತು ಅದರ ಸಮಿತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಭತ್ಯೆಗಳನ್ನು ನಿಗದಿಪಡಿಸಬಹುದು.

(2) ಸಂಸ್ಥೆಯ ಕಾರ್ಯದರ್ಶಿಯು ಪರಿಷತ್ತಿನ ಮತ್ತು ಅದರ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರತಕ್ಕದು, ಆದರೆ ಅವುಗಳಲ್ಲಿ ಮತಚಲಾಯಿಸಲು ಹಕ್ಕುಳ್ಳವನಾಗಿರತಕ್ಕದಲ್ಲ.

**17. ಪರಿಷತ್ತಿನ ಸಮಿತಿಗಳು.**- (1) ಪರಿಷತ್ತು , ತನ್ನ ಸದಸ್ಯರೊಳಗಿಂದ ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ರಚಿಸತಕ್ಕದು, ಎಂದರೆ :-

(ಎ) ಕಾರ್ಯನಿರ್ವಾಹಕ ಸಮಿತಿ;

(ಬಿ) ಶಿಸ್ತು ಪಾಲನಾ ಸಮಿತಿ; ಮತ್ತು

(ಸಿ) ಪರೀಕ್ಷಾ ಸಮಿತಿ.

(2) ಪರಿಷತ್ತು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ತನ್ನ ಸದಸ್ಯರೊಳಗಿಂದ, ತರಬೇತಿ ಮತ್ತು ಶೈಕ್ಷಣಿಕ ಸೌಲಭ್ಯಗಳ ಸಮಿತಿ, ವೃತ್ತೀಯ ಸಂಶೋಧನೆ ಮತ್ತು ಪ್ರಕಟಣೆ ಸಮಿತಿ, ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಇತರ ಸಮಿತಿಗಳನ್ನು ಸಹ ರಚಿಸಬಹುದು.

(3) ಕಾರ್ಯನಿರ್ವಾಹಕ ಸಮಿತಿಯು ಪದನಿಮಿತ್ತ ಅಧ್ಯಕ್ಷ ಮತ್ತು ಉಪಾಧ್ಯಕ್ಷ- ಇವರನ್ನು ಮತ್ತು ಪರಿಷತ್ತಿನಿಂದ ಆಯ್ಕೆಗೊಂಡ ಪರಿಷತ್ತಿನ ಮೂವರು ಇತರ ಸದಸ್ಯರನ್ನು ಒಳಗೊಂಡಿರತಕ್ಕದು.

(4) ಶಿಸ್ತುಪಾಲನಾ ಸಮಿತಿಯು ಪದನಿಮಿತ್ತ ಅಧ್ಯಕ್ಷನನ್ನು, ಕೇಂದ್ರ ಸರ್ಕಾರವು ಪರಿಷತ್ತಿಗೆ ನಾಮನಿರ್ದೇಶನ ಮಾಡಿದ ಸದಸ್ಯರೊಳಗಿಂದ ಆ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಸದಸ್ಯ ಮತ್ತು ಪರಿಷತ್ತು ಆಯ್ಕೆ ಮಾಡಬೇಕಾದ ಒಬ್ಬ ಸದಸ್ಯ -ಇವರನ್ನು ಒಳಗೊಂಡಿರತಕ್ಕದು.

(5) ಪರೀಕ್ಷಾ ಸಮಿತಿಯು ನಿರ್ಧರಿಸಬಹುದಾದಂತೆ ಪದನಿಮಿತ್ತ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಮತ್ತು ಪರಿಷತ್ತು ಆಯ್ಕೆ ಮಾಡಿದ ಪರಿಷತ್ತಿನ ಇಬ್ಬರು ಇತರ ಸದಸ್ಯರನ್ನು ಒಳಗೊಂಡಿರತಕ್ಕದು.

(6) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, (2)ನೇ ಉಪ-ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಮಿತಿಯು ಪರಿಷತ್ತಿನ ಮಂಜೂರಾತಿಯಿಂದ, ಸಮಿತಿಯು ಯುಕ್ತವೆಂದು ಯೋಚಿಸುವಂತೆ ಸಮಿತಿಯ ಒಟ್ಟು ಸದಸ್ಯರ ಮೂರನೆಯ ಎರಡರಷ್ಟನ್ನು ಮೀರದ ಸಂಸ್ಥೆಯ ಇತರ

ಸದಸ್ಯರನ್ನು ಸಹ ಸದಸ್ಯರೆಂದು ಸೇರಿಸಿಕೊಳ್ಳಬಹುದು ಮತ್ತು ಹಾಗೆ ಸಹ ಸದಸ್ಯನೆಂದು ಸೇರಿಸಿಕೊಳ್ಳಲಾದ ಯಾವನೇ ಸದಸ್ಯನು ಸಮಿತಿಯ ಸದಸ್ಯನ ಎಲ್ಲಾ ಹಕ್ಕುಗಳನ್ನು ಚಲಾಯಿಸಲು ಹಕ್ಕುಳ್ಳವನಾಗಿರತಕ್ಕುದು.

(7) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ಸಮಿತಿಯು ತನ್ನ ಅಧ್ಯಕ್ಷನನ್ನು ತಾನೇ ಆಯ್ಕೆ ಮಾಡಿಕೊಳ್ಳತಕ್ಕುದು :

ಪರಂತು,--

(i) ಅಧ್ಯಕ್ಷನು ಅಂಥ ಸಮಿತಿಯ ಸದಸ್ಯನಾಗಿರುವಲ್ಲಿ, ಅವನು ಅಂಥ ಸಮಿತಿಯ ಅಧ್ಯಕ್ಷನಾಗಿರತಕ್ಕುದು ಮತ್ತು ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷನು, ಅಂಥ ಸಮಿತಿಯ ಸದಸ್ಯನಾಗಿದ್ದರೆ ಅವನು ಅಧ್ಯಕ್ಷನಾಗಿರತಕ್ಕುದು ; ಮತ್ತು

(ii) ಅಧ್ಯಕ್ಷನು ಅಂಥ ಸಮಿತಿಯ ಸದಸ್ಯನಾಗಿರದಿರುವಲ್ಲಿ ಆದರೆ ಉಪಾಧ್ಯಕ್ಷನು ಸದಸ್ಯನಾಗಿರುವಲ್ಲಿ, ಅವನು ಅದರ ಅಧ್ಯಕ್ಷನಾಗಿರತಕ್ಕುದು.

(8) ಈ ಪ್ರಕರಣದ ಮೇರೆಗೆ ರಚಿಸಲಾದ ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಚಲಾಯಿಸತಕ್ಕುದು ಮತ್ತು ಅವುಗಳನ್ನು ಚಲಾಯಿಸುವಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟಿರತಕ್ಕುದು.

**18. ಪರಿಷತ್ತಿನ ಹಣಕಾಸುಗಳು.**- (1) ಪರಿಷತ್ತಿನ ವ್ಯವಸ್ಥಾಪನೆ ಮತ್ತು ನಿಯಂತ್ರಣದಲ್ಲಿ ಒಂದು ನಿಧಿಯನ್ನು ಸ್ಥಾಪಿಸತಕ್ಕುದು ಮತ್ತು ಪರಿಷತ್ತು ಸ್ವೀಕರಿಸಿದ (ದೇಣಿಗೆಗಳು ಮತ್ತು ಅನುದಾನಗಳು ಸೇರಿದಂತೆ) ಎಲ್ಲಾ ಹಣಗಳನ್ನು ಆ ನಿಧಿಗೆ ಪಾವತಿ ಮಾಡತಕ್ಕುದು ಮತ್ತು ಪರಿಷತ್ತು ಕೊಡುವ ಯಾವುದೇ ದೇಣಿಗೆಗಳು ಮತ್ತು ಯುಕ್ತವಾಗಿ ವಹಿಸಿದ ಹೊಣೆಗಾರಿಕೆಗಳು ಸೇರಿ ಎಲ್ಲಾ ವೆಚ್ಚಗಳನ್ನು ಆ ನಿಧಿಯಿಂದ ಭರಿಸತಕ್ಕುದು.

(2) ಪರಿಷತ್ತು, ತತ್ಕಾಲದಲ್ಲಿ ಆ ನಿಧಿಯ ಲೆಕ್ಕಕ್ಕೆ ಜಮೆಯಿರುವ ಯಾವುದೇ ಹಣವನ್ನು ಯಾವುದೇ ಸರ್ಕಾರಿ ಭದ್ರತೆಯಲ್ಲಿ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿರುವ ಯಾವುದೇ ಇತರ ಭದ್ರತೆಯಲ್ಲಿ ಹೂಡಬಹುದು.

(3) ಪರಿಷತ್ತು, ಬಂಡವಾಳವನ್ನು ರಾಜಸ್ವದಿಂದ ಪ್ರತ್ಯೇಕಿಸಿ ನಿಧಿಗಳ ಸರಿಯಾದ ಲೆಕ್ಕ ಪತ್ರಗಳನ್ನು ಇಡತಕ್ಕುದು.

(4) ಪರಿಷತ್ತಿನ ವಾರ್ಷಿಕ ಲೆಕ್ಕ ಪತ್ರಗಳು ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949ರ ಅರ್ಥವ್ಯಾಪ್ತಿಯೊಳಗೆ ವೃತ್ತಿಯಲ್ಲಿರುವ ಚಾರ್ಟರ್ಡ್ ಅಕೌಂಟೆಂಟನ ಲೆಕ್ಕ ಪರಿಶೋಧನೆಗೆ ಒಳಪಟ್ಟಿರತಕ್ಕದು ಮತ್ತು ಅವನನ್ನು ಪರಿಷತ್ತು ಪ್ರತಿ ವರ್ಷ ನೇಮಕ ಮಾಡತಕ್ಕುದು:

ಪರಂತು, ಚಾರ್ಟರ್ಡ್ ಅಕೌಂಟೆಂಟನಾಗಿರುವ ಪರಿಷತ್ತಿನ ಯಾವನೇ ಸದಸ್ಯನು ಅಥವಾ ಅಂಥ ಸದಸ್ಯನೊಂದಿಗೆ ಪಾಲುದಾರಿಕೆಯಲ್ಲಿರುವ ಯಾವನೇ ಸದಸ್ಯನು ಈ ಉಪ-ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧಕನೆಂದು ನೇಮಕಗೊಳ್ಳಲು ಅರ್ಹನಾಗತಕ್ಕುದಲ್ಲ.

(5) ಪ್ರತಿವರ್ಷದ ಕೊನೆಯಲ್ಲಿ ಕಾರ್ಯ ಸಾಧ್ಯವಾದಷ್ಟು ಬೇಗನೆ, ಆದರೆ ಮುಂದಿನ ವರ್ಷದ ಸೆಪ್ಟೆಂಬರ್ ತಿಂಗಳ ಮೂವತ್ತನೇ ದಿವಸಕ್ಕಿಂತ ತಡವಾಗಿಯಲ್ಲದೆ, ಪರಿಷತ್ತು ಲೆಕ್ಕಪರಿಶೋಧಿತವಾದ ಲೆಕ್ಕ ಪತ್ರಗಳ ಒಂದು ಪ್ರತಿಯನ್ನು ಮತ್ತು ಆ ವರ್ಷದ ಪರಿಷತ್ತಿನ ವರದಿಯನ್ನು ಭಾರತದ ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು ಮತ್ತು ಸದರಿ ಲೆಕ್ಕ ಪತ್ರಗಳ ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ಸಂಸ್ಥೆಯ ಎಲ್ಲಾ ಸದಸ್ಯರಿಗೆ ಕಳುಹಿಸತಕ್ಕುದು.

(6) ಈ ಬಗ್ಗೆ ಕೇಂದ್ರ ಸರ್ಕಾರವು ಲಿಖಿತ ಆದೇಶದ ಮೂಲಕ ನೀಡಬಹುದಾದಂಥ ನಿರ್ದೇಶನಗಳಿಗೊಳಪಟ್ಟು, ಪರಿಷತ್ತು-

(ಎ) ತನ್ನ ಹೊಣೆಗಾರಿಕೆಗಳನ್ನು ಭರಿಸುವುದಕ್ಕಾಗಿ ಅಗತ್ಯವಾದ ಯಾವುದೇ ಹಣವನ್ನು ನಿಧಿಯ ಭದ್ರತೆಯ ಮೇಲೆ ಅಥವಾ ತತ್ಕಾಲದಲ್ಲಿ ಆ ನಿಧಿಗೆ ಸೇರಿರುವ ಯಾವುದೇ ಇತರ ಆಸ್ತಿಗಳ ಭದ್ರತೆಯ ಮೇಲೆ ಸಾಲವಾಗಿ ಪಡೆಯಬಹುದು ; ಅಥವಾ

(ಬಿ) ಚಾಲ್ತಿ ಹೊಣೆಗಾರಿಕೆಗಳನ್ನು ಭರಿಸುವ ಉದ್ದೇಶಕ್ಕಾಗಿ ವರಮಾನ ಪ್ರಾಪ್ತವಾಗುವುದೆಂದು ನಿರೀಕ್ಷಿಸಿ ತಾತ್ಕಾಲಿಕ ಸಾಲ ಅಥವಾ ಓವರ್ ಡ್ರಾಫ್ಟ್ ಮೂಲಕ ಸಾಲ ಪಡೆಯಬಹುದು.

## ಅಧ್ಯಾಯ –IV

## ಸದಸ್ಯರ ರಿಜಿಸ್ಟರು

**19. ರಿಜಿಸ್ಟರು.–** (1) ಪರಿಷತ್ತು, ಸಂಸ್ಥೆಯ ಸದಸ್ಯರ ಒಂದು ರಿಜಿಸ್ಟರನ್ನು ನಿಯಮಿಸಿದ ರೀತಿಯಲ್ಲಿ ಇಟ್ಟುಕೊಂಡು ಬರತಕ್ಕದು.

(2) ಆ ರಿಜಿಸ್ಟರು ಸಂಸ್ಥೆಯ ಪ್ರತಿಯೊಬ್ಬ ಸದಸ್ಯನ ಬಗ್ಗೆ ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದು, ಎಂದರೆ :–

(ಎ) ಅವನ ಪೂರ್ಣ ಹೆಸರು, ಜನ್ಮ ದಿನಾಂಕ, ಅಧಿವಾಸ, ನಿವಾಸದ ಮತ್ತು ವೃತ್ತೀಯ ವಿಳಾಸಗಳು ;

(ಬಿ) ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿದ ದಿನಾಂಕ ;

(ಸಿ) ಅವನ ಅರ್ಹತೆಗಳು ;

(ಡಿ) ಅವನು ವೃತ್ತಿ ಪ್ರಮಾಣ ಪತ್ರ ಹೊಂದಿರುವನೇ ; ಮತ್ತು

(ಇ) ನಿಯಮಿಸಬಹುದಾದಂಥ ಯಾವುದೇ ಇತರ ವಿವರಗಳು.

(3) ಪರಿಷತ್ತು, ಪ್ರತಿ ವರ್ಷ ಏಪ್ರಿಲ್ ಮೊದಲನೇ ದಿವಸದಂದು ಇದ್ದಂತೆ ಸಂಸ್ಥೆಯ ಸದಸ್ಯರ ಒಂದು ಪಟ್ಟಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದು ಮತ್ತು ಯಾವನೇ ಸದಸ್ಯನು ಅಂಥ ಪಟ್ಟಿಯ ಪ್ರತಿಯನ್ನು ತನಗೆ ಕಳುಹಿಸುವಂತೆ ಕೋರಿದರೆ, ಹಾಗೆ ಕಳುಹಿಸಿಕೊಡತಕ್ಕದು.

(4) ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿದ ತರುವಾಯ, ಅವನು ಸಹ ಸದಸ್ಯ ಅಥವಾ ಅಧಿಸದಸ್ಯನಾಗಿರುವುದಕ್ಕನುಸಾರ ನಿಯಮಿಸಬಹುದಾದಂಥ ಬೇರೆ ಬೇರೆಯಾದ ವಾರ್ಷಿಕ ಸದಸ್ಯತ್ವದ ಫೀಜಿನ ಮೊಬಲಗನ್ನು ಸಂದಾಯ ಮಾಡತಕ್ಕದು, ಮತ್ತು ಆ ಫೀಜು ಯಾವುದೇ ಸಂದರ್ಭದಲ್ಲಿ ಮೂರು ನೂರು ರೂಪಾಯಿಗಳಿಗೆ ಮೀರತಕ್ಕದಲ್ಲ.

**20. ರಿಜಿಸ್ಟರಿನಿಂದ ತೆಗೆದುಹಾಕುವುದು.–** (1) ಸಂಸ್ಥೆಯ ಯಾವ ಸದಸ್ಯನು,–

(ಎ) ಮರಣ ಹೊಂದಿರುವನೋ ; ಅಥವಾ

(ಬಿ) ತನ್ನ ಹೆಸರು ತೆಗೆದುಹಾಕಬೇಕೆಂದು ಕೋರಿರುವನೋ ; ಅಥವಾ

(ಸಿ) ಸಂದಾಯ ಮಾಡುವಂತೆ ತನ್ನನ್ನು ಅಗತ್ಯಪಡಿಸಲಾಗಿರುವ ಯಾವುದೇ ನಿಯಮಿಸಿದ ಫೀಜನ್ನು ಸಂದಾಯ ಮಾಡಿಲ್ಲವೋ; ಅಥವಾ

(ಡಿ) ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದು ಮಾಡಿದ ಕಾಲದಲ್ಲಿ 8ನೆಯ ಪ್ರಕರಣದಲ್ಲಿ ಹೇಳಿರುವ ಯಾವುದೇ ಅಸಮರ್ಥತೆಗೆ ಒಳಗಾಗಿರುವನೆಂದು ಕಂಡುಬರುವನೋ ಅಥವಾ ಹೆಸರನ್ನು ನಮೂದಿಸಿದ ತರುವಾಯದ ಯಾವುದೇ ಕಾಲದಲ್ಲಿ ಯಾವುದೇ ಅಂಥ ಅಸಮರ್ಥತೆಗೆ ಒಳಗಾಗಿದ್ದಾನೆಯೋ ಅಥವಾ ಯಾವುದೇ ಇತರ ಕಾರಣಕ್ಕಾಗಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಉಳಿಸಿಕೊಂಡು ಬರುವ ಅರ್ಹತೆಯು ಕೊನೆಗೊಂಡಿದೆಯೋ

–ಆ ಸದಸ್ಯನ ಹೆಸರನ್ನು ಪರಿಷತ್ತು ರಿಜಿಸ್ಟರಿನಿಂದ ತೆಗೆದುಹಾಕಬಹುದು.

(2) ಯಾವ ಸದಸ್ಯನ ಸಂಬಂಧದಲ್ಲಿ ಅವನನ್ನು ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಲು ಈ ಅಧಿನಿಯಮದ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆಯೋ ಆ ಸದಸ್ಯನ ಹೆಸರನ್ನು ಪರಿಷತ್ತು ರಿಜಿಸ್ಟರಿನಿಂದ ತೆಗೆದುಹಾಕತಕ್ಕದು.

## ಅಧ್ಯಾಯ -V

## ದುರ್ನಡತೆ

**21. ಸಂಸ್ಥೆಯ ಸದಸ್ಯರ ದುರ್ನಡತೆಯ ಸಂಬಂಧದಲ್ಲಿ ನಡೆಸುವ ವಿಚಾರಣೆಗಳ ಪ್ರಕ್ರಿಯೆ.-** (1) ಪರಿಷತ್ತಿಗೆ ಮಾಹಿತಿ ಬಂದ ಮೇಲೆ, ಅಥವಾ ಅದಕ್ಕೆ ನೀಡಿದ ದೂರನ್ನು ಅದು ಸ್ವೀಕರಿಸಿದ ಮೇಲೆ ಪರಿಷತ್ತು, ಸಂಸ್ಥೆಯ ಯಾವನೇ ಸದಸ್ಯನು ಯಾವುದೇ ವೃತ್ತಿ ಸಂಬಂಧವಾದ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ಮೇಲ್ನೋಟಕ್ಕೆ ಅಭಿಪ್ರಾಯಪಡುವಲ್ಲಿ, ಅದು ಆ ಪ್ರಕರಣವನ್ನು, 17ನೇ ಪ್ರಕರಣದ ಮೇರೆಗೆ ರಚಿಸಲಾದ ಶಿಸ್ತುಪಾಲನಾ ಸಮಿತಿಗೆ ಒಪ್ಪಿಸತಕ್ಕುದು ಮತ್ತು ಶಿಸ್ತುಪಾಲನಾ ಸಮಿತಿಯು ಆ ತರುವಾಯ ಅಂಥ ವಿಚಾರಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಡೆಸತಕ್ಕುದು ಮತ್ತು ತನ್ನ ವಿಚಾರಣೆಯ ಫಲಿತಾಂಶವನ್ನು ಪರಿಷತ್ತಿಗೆ ವರದಿ ಮಾಡತಕ್ಕುದು.

(2) ಪರಿಷತ್ತು ಅಂಥ ವರದಿಯನ್ನು ಸ್ವೀಕರಿಸಿದ ತರುವಾಯ, ಸಂಸ್ಥೆಯ ಸದಸ್ಯನು ಯಾವುದೇ ವೃತ್ತಿ ಸಂಬಂಧವಾದ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನಲ್ಲವೆಂದು ಅದಕ್ಕೆ ಕಂಡುಬಂದರೆ, ಅದು ತದನುಸಾರ ತನ್ನ ನಿರ್ಣಯವನ್ನು ದಾಖಲಿಸತಕ್ಕುದು ಮತ್ತು ವ್ಯವಹರಣೆಗಳನ್ನು ದಾಖಲು ಮಾಡುವಂತೆ ಅಥವಾ ಸಂದರ್ಭಾನುಸಾರ ದೂರನ್ನು ವಜಾ ಮಾಡುವಂತೆ ನಿರ್ದೇಶಿಸತಕ್ಕುದು.

(3) ಪರಿಷತ್ತು ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಸಂಸ್ಥೆಯ ಸದಸ್ಯನು ಯಾವುದೇ ವೃತ್ತಿ ಸಂಬಂಧವಾದ ಅಥವಾ ದುರ್ನಡತೆಯ ತಪ್ಪಿತಸ್ಥನೆಂದು ಅದಕ್ಕೆ ಕಂಡುಬಂದರೆ, ಅದು ತದನುಸಾರ ತನ್ನ ನಿರ್ಣಯವನ್ನು ದಾಖಲು ಮಾಡತಕ್ಕುದು ಮತ್ತು ಮುಂದಿನ ಉಪ-ಪ್ರಕರಣದಲ್ಲಿ ಗೊತ್ತು ಪಡಿಸಲಾದ ರೀತಿಯಲ್ಲಿ ಮುಂದುವರಿಯತಕ್ಕುದು.

(4) ಸಂಸ್ಥೆಯ ಸದಸ್ಯನು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ಸಂಬಂಧವಾದ ದುರ್ನಡತೆಯ ತಪ್ಪಿತಸ್ಥನೆಂದು ಕಂಡುಬಂದಾಗ, ಪರಿಷತ್ತು ಆ ಪ್ರಕರಣದಲ್ಲಿ ಅವನ ವಿರುದ್ಧ ಆದೇಶ ನೀಡುವ ಮೊದಲು ಆ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ಒದಗಿಸತಕ್ಕುದು ಮತ್ತು ಆ ತರುವಾಯ ಈ ಕೆಳಕಂಡವುಗಳಲ್ಲಿ ಯಾವುದೇ ಆದೇಶವನ್ನು ಮಾಡಬಹುದು, ಎಂದರೆ:-

(ಎ) ಸದಸ್ಯನಿಗೆ ವಾಗ್ದಂಡನೆ ವಿಧಿಸಬಹುದು ;

(ಬಿ) ಐದು ವರ್ಷಗಳಿಗೆ ಮೀರದಂತೆ ಪರಿಷತ್ತು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ರಿಜಿಸ್ಟರಿನಿಂದ ಸದಸ್ಯನ ಹೆಸರನ್ನು ತೆಗೆದುಹಾಕಬಹುದು :

ಪರಂತು, ಯಾವುದೇ ಪ್ರಕರಣದಲ್ಲಿ ಸದಸ್ಯನ ಹೆಸರನ್ನು ರಿಜಿಸ್ಟರಿನಿಂದ ಐದು ವರ್ಷಗಳಿಗೂ ಮೀರಿದ ಅವಧಿಯವರೆಗೆ ಅಥವಾ ಖಾಯಂ ಆಗಿ ತೆಗೆದುಹಾಕಲು ಪರಿಷತ್ತು ಅಭಿಪ್ರಾಯ ಪಟ್ಟಿರುವಾಗ, ಅದು (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ, ಆದರೆ ಆ ಪ್ರಕರಣವನ್ನು ಅದರ ಮೇಲಿನ ತನ್ನ ಶಿಫಾರಸ್ಸುಗಳ ಸಹಿತ ಉಚ್ಚನ್ಯಾಯಾಲಯಕ್ಕೆ ಕಳುಹಿಸತಕ್ಕುದು.

(5) ಯಾವ ದುರ್ನಡತೆಯ ಸಂಬಂಧದಲ್ಲಿ ಸಂಸ್ಥೆಯ ಯಾವನೇ ಸದಸ್ಯನನ್ನು ತಪ್ಪಿತಸ್ಥನೆಂದು ಪರಿಷತ್ತು ನಿರ್ಣಯಿಸಿರುವುದೋ ಆ ದುರ್ನಡತೆಯು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ದುರ್ನಡತೆಯಾಗಿರುವಲ್ಲಿ, ಅದು ಆ ಪ್ರಕರಣವನ್ನು ಅದರ ಮೇಲಿನ ತನ್ನ ಶಿಫಾರಸ್ಸುಗಳ ಸಹಿತ ಉಚ್ಚನ್ಯಾಯಾಲಯಕ್ಕೆ ಕಳುಹಿಸತಕ್ಕುದು.

(6) (4)ನೇ ಉಪ-ಪ್ರಕರಣ ಅಥವಾ (5)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಪ್ರಕರಣವನ್ನು ಸ್ವೀಕರಿಸಿದ ಮೇಲೆ, ಉಚ್ಚನ್ಯಾಯಾಲಯವು ಆ ಪ್ರಕರಣದ ಸುನಾವಣೆಗೆ ದಿನಾಂಕವನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ನಿಗದಿಪಡಿಸಿದ ದಿನಾಂಕದ ನೋಟೀಸನ್ನು ಸಂಬಂಧಿಸಿದ ಸಂಸ್ಥೆಯ ಸದಸ್ಯನಿಗೆ, ಪರಿಷತ್ತಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸುವಂತೆ ಮಾಡತಕ್ಕುದು ಮತ್ತು ಅಂಥ

ಸದಸ್ಯನಿಗೆ, ಪರಿಷತ್ತಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದು ಮತ್ತು ಆ ತರುವಾಯ ಈ ಕೆಳಕಂಡವುಗಳಲ್ಲಿ ಯಾವುದೇ ಆದೇಶವನ್ನು ಮಾಡಬಹುದು, ಎಂದರೆ:-

(ಎ) ವ್ಯವಹರಣೆಗಳನ್ನು ದಾಖಲ್ಮಾಡಲು ನಿರ್ದೇಶಿಸಬಹುದು, ಅಥವಾ ಸಂದರ್ಭಾನುಸಾರ ದೂರನ್ನು ವಜಾ ಮಾಡಬಹುದು;

(ಬಿ) ಸದಸ್ಯನಿಗೆ ವಾಗ್ದಂಡನೆ ವಿಧಿಸಬಹುದು;

(ಸಿ) ಅವನನ್ನು ಸಂಸ್ಥೆಯ ಸದಸ್ಯತ್ವದಿಂದ ಖಾಯಂ ಆಗಿ ಇಲ್ಲವೆ ಉಚ್ಚನ್ಯಾಯಾಲಯವು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ತೆಗೆದು ಹಾಕಬಹುದು;

(ಡಿ) ಹೆಚ್ಚಿನ ವಿಚಾರಣೆ ಮಾಡಿ ವರದಿ ಮಾಡುವುದಕ್ಕಾಗಿ ಪ್ರಕರಣವನ್ನು ಪರಿಷತ್ತಿಗೆ ಒಪ್ಪಿಸಬಹುದು.

(7) ಯಾವುದೇ ಉಚ್ಚನ್ಯಾಯಾಲಯವು, ತನ್ನ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು ಇನ್ನೊಂದು ಉಚ್ಚನ್ಯಾಯಾಲಯಕ್ಕೆ ವರ್ಗಾಯಿಸಿದರೆ ನ್ಯಾಯದ ಉದ್ದೇಶವು ಈಡೇರುವುದೆಂದು ಅಥವಾ ಪಕ್ಷಕಾರರ ಸಾಮಾನ್ಯ ಅನುಕೂಲಕ್ಕೆ ಎಡೆಮಾಡಿಕೊಡುವುದೆಂದು ಅದಕ್ಕೆ ಕಂಡುಬಂದಾಗ, ಅದು ತಾನು ವಿಧಿಸುವುದು ಯುಕ್ತವೆಂದು ಯೋಚಿಸುವಂಥ ಷರತ್ತುಗಳಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಆ ಪ್ರಕರಣವನ್ನು ಹಾಗೆ ವರ್ಗಾಯಿಸಬಹುದು ಮತ್ತು ಯಾವ ಉಚ್ಚನ್ಯಾಯಾಲಯಕ್ಕೆ ಅಂಥ ಪ್ರಕರಣವನ್ನು ವರ್ಗಾಯಿಸಲಾಗಿದೆಯೋ ಅದು ತನಗೆ ಪರಿಷತ್ತು ಆ ಪ್ರಕರಣವನ್ನು ಕಳುಹಿಸಿಕೊಟ್ಟಿದ್ದರೆ ಹೇಗೋ ಹಾಗೆ ಆ ಪ್ರಕರಣದೊಂದಿಗೆ ವ್ಯವಹರಿಸತಕ್ಕುದು.

**ವಿವರಣೆ:-I** ಈ ಪ್ರಕರಣದಲ್ಲಿ "ಉಚ್ಚನ್ಯಾಯಾಲಯ" ಎಂದರೆ, ಸರ್ವೋಚ್ಚ ನ್ಯಾಯಾಲಯವನ್ನು ಒಳಗೊಳ್ಳದೆ, ಯಾವ ವ್ಯಕ್ತಿಯ ನಡತೆಯನ್ನು ಕುರಿತು ವಿಚಾರಣೆಯನ್ನು ನಡೆಸಲಾಗುತ್ತಿದೆಯೋ ಆ ವ್ಯಕ್ತಿಯು ಸೇವೆಯಲ್ಲಿರುವ ಅಥವಾ ತನ್ನ ವೃತ್ತಿಯನ್ನು ನಡೆಸುತ್ತಿರುವ ಅಥವಾ ವಿಚಾರಣೆಯ ಪ್ರಾರಂಭದಲ್ಲಿ ತನ್ನ ವೃತ್ತಿಯ ಪ್ರಧಾನ ಸ್ಥಳವು ಇರುವ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಅಪೀಲು ಸಂಬಂಧವಾದ ಸರ್ವೋಚ್ಚ ಸಿವಿಲ್ ನ್ಯಾಯಾಲಯ :

ಪರಂತು, ಸಂಸ್ಥೆಯ ಇಬ್ಬರು ಅಥವಾ ಹೆಚ್ಚಿನ ಸದಸ್ಯರುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು, ಪರಿಷತ್ತು ವಿವಿಧ ಉಚ್ಚ ನ್ಯಾಯಾಲಯಗಳಿಗೆ ಕಳುಹಿಸಬೇಕಾಗಿರುವಾಗ, ಕೇಂದ್ರ ಸರ್ಕಾರವು ನ್ಯಾಯೋದ್ದೇಶ ಮತ್ತು ಪಕ್ಷಕಾರರ ಸಾಮಾನ್ಯ ಅನುಕೂಲ ಇವುಗಳನ್ನು ಗಮನಿಸಿ, ಉಚ್ಚ ನ್ಯಾಯಾಲಯಗಳ ಪೈಕಿ, ಇತರ ಉಚ್ಚನ್ಯಾಯಾಲಯಗಳನ್ನು ಹೊರತುಪಡಿಸಿ, ಯಾವ ಉಚ್ಚ ನ್ಯಾಯಾಲಯವು ಎಲ್ಲಾ ಸದಸ್ಯರ ವಿರುದ್ಧದ ಪ್ರಕರಣಗಳನ್ನು ಸುನಾವಣೆ ಮಾಡತಕ್ಕುದು ಎಂಬುದನ್ನು ನಿರ್ಧರಿಸತಕ್ಕುದು.

**ವಿವರಣೆII:-** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಸ್ಥೆಯ ಸದಸ್ಯ" ಎಂಬುದು ಆರೋಪಿತ ದುರ್ನಡತೆಯ ದಿನಾಂಕದಂದು ಸಂಸ್ಥೆಯ ಸದಸ್ಯನಾಗಿದ್ದ ವ್ಯಕ್ತಿಯು, ವಿಚಾರಣೆಯ ಕಾಲದಲ್ಲಿ ಸಂಸ್ಥೆಯ ಸದಸ್ಯನಾಗಿರುವುದು ಮುಕ್ತಾಯಗೊಂಡಿದ್ದರೂ, ಅವನನ್ನು ಒಳಗೊಳ್ಳುತ್ತದೆ.

(8) ಈ ಪ್ರಕರಣದ ಮೇರೆಗಿನ ಯಾವುದೇ ವಿಚಾರಣೆಯ ಉದ್ದೇಶಗಳಿಗಾಗಿ ಪರಿಷತ್ತು ಮತ್ತು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಶಿಸ್ತು ಪಾಲನಾ ಸಮಿತಿಯು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:-

(ಎ) ಯಾವನೇ ವ್ಯಕ್ತಿಗೆ ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು ;

(ಬಿ) ಯಾವುದೇ ದಸ್ತಾವೇಜನ್ನು ಕಂಡುಹಿಡಿಯುವುದು ಮತ್ತು ಅದನ್ನು ಹಾಜರುಪಡಿಸುವುದು; ಮತ್ತು

(ಸಿ) ಶಪಥ ಪತ್ರದ ಮೇಲೆ ಸಾಕ್ಷ್ಯವನ್ನು ಪಡೆಯುವುದು.

**22. ವೃತ್ತಿ ದುರ್ನಡತೆಯ ಪರಿಭಾಷೆ.**- ಈ ಅಧಿನಿಯಮದ ಉದ್ದೇಶಗಳಿಗಾಗಿ, "ವೃತ್ತಿ ದುರ್ನಡತೆ" ಎಂಬ ಪದಾವಳಿಯು, ಅನುಸೂಚಿಗಳಲ್ಲಿ ಯಾವುದರಲ್ಲಾಗಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯ ಅಥವಾ ಲೋಪವನ್ನು ಒಳಗೊಳ್ಳುವುದಾಗಿ ಭಾವಿಸತಕ್ಕುದು, ಆದರೆ ಯಾವುದೇ ಇತರ ಸನ್ನಿವೇಶಗಳಲ್ಲಿ ಸಂಸ್ಥೆಯ ಯಾವನೇ ಸದಸ್ಯನ ನಡತೆಯ ಬಗ್ಗೆ ವಿಚಾರಣೆ ನಡೆಸಲು 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಪರಿಷತ್ತಿಗೆ ಪ್ರದಾನ ಮಾಡಿದ ಅಧಿಕಾರ ಅಥವಾ ವಿಧಿಸಿದ ಕರ್ತವ್ಯ- ಇವುಗಳನ್ನು ಈ ಪ್ರಕರಣದಲ್ಲಿರುವುದು ಯಾವುದೂ ಯಾವುದೇ ರೀತಿಯಲ್ಲಿ ಪರಿಮಿತಿಗೊಳಿಸುವುದೆಂದು ಅಥವಾ ಮೊಟಕುಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

## ಅಧ್ಯಾಯ -VI

## ಪ್ರಾದೇಶಿಕ ಪರಿಷತ್ತುಗಳು

**23. ಪ್ರಾದೇಶಿಕ ಪರಿಷತ್ತುಗಳ ರಚನೆ ಮತ್ತು ಪ್ರಕಾರ್ಯಗಳು.** - (1) ಪರಿಷತ್ತು, ತನ್ನ ಪ್ರಕಾರ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಗೆ ಸಲಹೆ ನೀಡಲು ಮತ್ತು ಸಹಾಯ ಮಾಡಲು 9ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಒಂದು ಅಥವಾ ಹೆಚ್ಚು ಪ್ರಾದೇಶಿಕ ಕ್ಷೇತ್ರಗಳಲ್ಲಿ ತಾನು ಯುಕ್ತವೆಂದು ಭಾವಿಸಿದಾಗಲೆಲ್ಲ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಬಹುದು.

(2) ಪ್ರಾದೇಶಿಕ ಪರಿಷತ್ತುಗಳನ್ನು ನಿಯಮಿಸಬಹುದಾದ ರೀತಿಯಲ್ಲಿ ರಚಿಸತಕ್ಕುದು ಮತ್ತು ಅವು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಚಲಾಯಿಸತಕ್ಕುದು.

(3) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ವಿಸರ್ಜಿತ ಕಂಪನಿಯ ಪ್ರತಿಯೊಂದು ಪ್ರಾದೇಶಿಕ ಪರಿಷತ್ತು ಈ ಅಧಿನಿಯಮದ ಪ್ರಾರಂಭದಂದು, ಅಂಥ ಪ್ರಾರಂಭದ ನಿಕಟ ಪೂರ್ವದಲ್ಲಿ ಪ್ರಾದೇಶಿಕ ಪರಿಷತ್ತೆಂದು ಪ್ರಕಾರ್ಯ ನಿರ್ವಹಿಸುತ್ತಿದ್ದಂಥ ಪ್ರದೇಶಕ್ಕಾಗಿ ಸಂಸ್ಥೆಯ ಪ್ರಾದೇಶಿಕ ಪರಿಷತ್ತು ಆಗಿರತಕ್ಕುದು, ಮತ್ತು -

(i) ಅಂಥ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯವರೆಗೆ, ಅಥವಾ

(ii) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ಪ್ರದೇಶಕ್ಕಾಗಿ ಪ್ರಾದೇಶಿಕ ಪರಿಷತ್ತನ್ನು ರಚಿಸುವವರೆಗೆ

—ಇವುಗಳಲ್ಲಿ ಯಾವುದು ಮೊದಲೋ ಆವರೆಗೆ ಹಾಗೆ ಕಾರ್ಯನಿರ್ವಹಿಸತಕ್ಕುದು.

## ಅಧ್ಯಾಯ -VII

## ದಂಡನೆಗಳು

**24. ಸದಸ್ಯ , ಮುಂತಾದವನಾಗಿರುವೆನೆಂದು ಸುಳ್ಳು ಹೇಳಿದ್ದಕ್ಕೆ ದಂಡನೆ.**- 7ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವನೇ ವ್ಯಕ್ತಿಯು,—

(ಎ) ಸಂಸ್ಥೆಯ ಸದಸ್ಯನಾಗಿಲ್ಲದೆ,-

(i) ತಾನು ಸಂಸ್ಥೆಯ ಸದಸ್ಯನಾಗಿರುವೆನೆಂದು ತೋರಿಸಿಕೊಂಡರೆ ; ಅಥವಾ

(ii) "ಕಂಪನಿ ಕಾರ್ಯದರ್ಶಿ" ಎಂಬ ಪದನಾಮವನ್ನು ಬಳಸಿದರೆ; ಅಥವಾ

(iii) ತನ್ನ ಹೆಸರಿನ ಮುಂದೆ "ಎ.ಸಿ.ಎಸ್." ಅಥವಾ "ಎಫ್.ಸಿ.ಎಸ್." ಎಂಬ ಅಕ್ಷರಗಳನ್ನು ಬಳಸಿದರೆ; ಅಥವಾ

(ಬಿ) ಸಂಸ್ಥೆಯ ಸದಸ್ಯನಾಗಿದ್ದು, ವೃತ್ತಿ ಪ್ರಮಾಣ ಪತ್ರವನ್ನು ಹೊಂದಿಲ್ಲದೆ, ಕಂಪನಿ ಕಾರ್ಯದರ್ಶಿಯಾಗಿ ವೃತ್ತಿಯಲ್ಲಿರುವೆನೆಂದು ಅಥವಾ ವೃತ್ತಿಯನ್ನು ನಡೆಸುವೆನೆಂದು ತೋರಿಸಿಕೊಂಡರೆ,

-- ಅವನು ಮೊದಲ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**25. ಪರಿಷತ್ತಿನ ಹೆಸರನ್ನು ಬಳಸಿದ್ದಕ್ಕಾಗಿ ಅಥವಾ ಕಂಪನಿ ಕಾರ್ಯದರ್ಶಿಯ ಪದವಿ ನೀಡಿದ್ದಕ್ಕಾಗಿ ದಂಡನೆ.-** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಯಾವನೇ ವ್ಯಕ್ತಿಯು,-

(ಎ) ಸಂಸ್ಥೆಯ ಹೆಸರಿನ ಅಥವಾ ಸಾಮಾನ್ಯ ಮೊಹರಿನ ತದ್ರೂಪವಾಗಿರುವ ಅಥವಾ ಅವುಗಳನ್ನು ಸರಿಸುಮಾರಾಗಿ ಹೋಲುವ ಹೆಸರನ್ನು ಅಥವಾ ಸಾಮಾನ್ಯ ಮೊಹರನ್ನು ಸಾರ್ವಜನಿಕರನ್ನು ಮೋಸ ಮಾಡಲು ಅಥವಾ ಅವರು ಮೋಸ ಹೋಗುವ ಹಾಗೆ ಬಳಸತಕ್ಕುದಲ್ಲ;

(ಬಿ) ಸಂಸ್ಥೆಯ ಸದಸ್ಯನು ಹೊಂದಿರುವ ಕಂಪನಿ ಕಾರ್ಯದರ್ಶಿತ್ವಕ್ಕೆ ಸದೃಶವಾದ ಸ್ಥಾನಮಾನವನ್ನು ಹೊಂದಿರುವುದಾಗಿ ಅಥವಾ ಯಾವುದೇ ಅರ್ಹತೆಯನ್ನು ಅಥವಾ ಸಕ್ಷಮತೆಯನ್ನು ಪಡೆದಿರುವುದಾಗಿ ಸೂಚಿಸುವಂಥ ಅಥವಾ ಸೂಚಿಸುವ ತಾತ್ಪರ್ಯವಾಗುವ ಯಾವುದೇ ಪದವಿ, ಡಿಪ್ಲೋಮಾ ಅಥವಾ ಪ್ರಮಾಣ ಪತ್ರವನ್ನು ಅಥವಾ ಯಾವುದೇ ಪದಾಭಿದಾನವನ್ನು ನೀಡತಕ್ಕುದಲ್ಲ ; ಅಥವಾ

(ಸಿ) ಕಂಪನಿ ಕಾರ್ಯದರ್ಶಿಗಳ ವೃತ್ತಿಯನ್ನು ಯಾವುದೇ ರೀತಿಯಲ್ಲಿ ವಿನಿಯಮಿಸಲು ಯತ್ನಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುವೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ ಮೊದಲ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಯಾವುದೇ ವಿಶ್ವವಿದ್ಯಾನಿಲಯ ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ಇತರ ಸಂಸ್ಥೆಗೆ ಅಥವಾ ಆ ಸಂಸ್ಥೆಗೆ ಸಂಯೋಜಿತವಾಗಿರುವ ಯಾವುದೇ ನಿಕಾಯಕ್ಕೆ ಅನ್ವಯಿಸತಕ್ಕುದಲ್ಲ.

**26. ಕಂಪನಿಗಳು, ಕಂಪನಿ ಕಾರ್ಯದರ್ಶಿತ್ವದಲ್ಲಿ ತೊಡಗದಿರುವುದು.-** (1) ಭಾರತದಲ್ಲಿ ಅಥವಾ ಬೇರೆಡೆಯಲ್ಲಿ ನಿಗಮಿತವಾಗಿರುವ ಯಾವುದೇ ಕಂಪನಿಯು, ಕಂಪನಿ ಕಾರ್ಯದರ್ಶಿಯಾಗಿ ವೃತ್ತಿ ನಡೆಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಕಂಪನಿಯು ಮೊದಲ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದು.

**27. ಅನಧಿಕೃತ ವ್ಯಕ್ತಿಗಳು ದಸ್ತಾವೇಜುಗಳಿಗೆ ಸಹಿ ಹಾಕದಿರುವುದು.-** (1) ಸಂಸ್ಥೆಯ ಸದಸ್ಯನಲ್ಲದ ಯಾವನೇ ಇತರ ವ್ಯಕ್ತಿಯು ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯ ವೃತ್ತೀಯ ಸಾಮರ್ಥ್ಯದಲ್ಲಿ ಅವನ ಪರವಾಗಿ ಅಥವಾ ಅಂಥ ಕಂಪನಿ ಕಾರ್ಯದರ್ಶಿಗಳ ಫರ್ಮಿನ ವೃತ್ತೀಯ ಸಾಮರ್ಥ್ಯದಲ್ಲಿ ಅದರ ಪರವಾಗಿ ಯಾವುದೇ ದಸ್ತಾವೇಜಿಗೆ ಸಹಿ ಹಾಕತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ, ಮೊದಲ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ

ಜುಲ್ಮಾನೆಯಿಂದ ಮತ್ತು ಆ ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಿರುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧ ನಡೆದ ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ಯಾವುದೇ ದಂಡನೆಗೆ ಗುರಿಯಾಗತಕ್ಕುದು :

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಯಾವನೇ ವ್ಯಕ್ತಿಯು ಅಪರಾಧವು ತನಗೆ ತಿಳಿಯದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನೂ ಎಲ್ಲ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಕಂಪನಿಯ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಆ ಅಪರಾಧವು ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅದು ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಆದುದೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು.

**ವಿವರಣೆ:**–– ಈ ಪ್ರಕರಣದ ಉದ್ದೇಶಗಳಿಗಾಗಿ,––

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನಲ್ಲಿನ ಪಾಲುದಾರ.

**29. ಕಾನೂನು ಕ್ರಮ ಜರುಗಿಸಲು ಮಂಜೂರಾತಿ.-** ಪರಿಷತ್ತಿನ ಅಥವಾ ಕೇಂದ್ರ ಸರ್ಕಾರದ ಆದೇಶದ ಮೂಲಕ ಅಥವಾ ಮೇರೆಗೆ ಸಲ್ಲಿಸಿದ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸತಕ್ಕುದಲ್ಲ.

## ಅಧ್ಯಾಯ -VIII

### ಅಪೀಲುಗಳು

**30. ಅಪೀಲು.-** (1) ಸಂಸ್ಥೆಯ ಯಾವನೇ ಸದಸ್ಯನ ಮೇಲೆ 21ನೇ ಪ್ರಕರಣದ (4)ನೇ ಉಪ-ಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ದಂಡನೆಗಳ ಪೈಕಿ ಯಾವುದೇ ದಂಡನೆಯನ್ನು ವಿಧಿಸುವ ಪರಿಷತ್ತಿನ ಯಾವುದೇ ಆದೇಶದಿಂದ ಬಾಧಿತನಾಗುವ ಸದಸ್ಯನು, ಆ ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಒಳಗಾಗಿ ಉಚ್ಚನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲನ್ನು ಸಕಾಲದಲ್ಲಿ ಸಲ್ಲಿಸುವಲ್ಲಿ ಸದಸ್ಯನಿಗೆ ಸಾಕಷ್ಟು ಕಾರಣಗಳಿಂದ ಅಡಚಣೆಯುಂಟಾಗಿತ್ತೆಂದು ಉಚ್ಚನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಮೂವತ್ತು ದಿವಸಗಳ ಸದರಿ ಅವಧಿಯ ಮುಕ್ತಾಯದ ನಂತರವೂ ಸಹಾ ಅಪೀಲನ್ನು ಸ್ವೀಕರಿಸಬಹುದು.

(2) ಉಚ್ಚನ್ಯಾಯಾಲಯವು ತಾನೇ ಸ್ವತಃ ಅಥವಾ ಅನ್ಯಥಾ, ಯಾವುದೇ ಪ್ರಕರಣದ ದಾಖಲೆಗಳನ್ನು ತರಿಸಿಕೊಂಡ ತರುವಾಯ 21ನೇ ಪ್ರಕರಣದ (2)ನೇ ಉಪ-ಪ್ರಕರಣ ಅಥವಾ (4)ನೇ ಉಪ-ಪ್ರಕರಣದ ಮೇರೆಗೆ ಪರಿಷತ್ತು ಮಾಡಿದ ಯಾವುದೇ ಆದೇಶವನ್ನು ಪರಿಷ್ಕರಿಸಬಹುದು, ಮತ್ತು,-

(ಎ) ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟುಗೊಳಿಸಬಹುದು ಅಥವಾ ತಳ್ಳಿಹಾಕಬಹುದು ;

(ಬಿ) ಯಾವುದೇ ದಂಡವನ್ನು ವಿಧಿಸಬಹುದು ಅಥವಾ ಆ ಆದೇಶದ ಮೂಲಕ ವಿಧಿಸಲಾದ ದಂಡವನ್ನು ತಳ್ಳಿಹಾಕಬಹುದು, ಕಡಿಮೆ ಮಾಡಬಹುದು, ಸ್ಥಿರೀಕರಿಸಬಹುದು ಅಥವಾ ಅಧಿಕಗೊಳಿಸಬಹುದು ;

(ಸಿ) ಪ್ರಕರಣದ ಸನ್ನಿವೇಶಗಳಲ್ಲಿ ಉಚ್ಚನ್ಯಾಯಾಲಯವು ಯುಕ್ತವೆಂದು ಪರ್ಯಾಲೋಚಿಸುವಂಥ ಇನ್ನೂ ಹೆಚ್ಚಿನ ವಿಚಾರಣೆಗಾಗಿ ಆ ಪ್ರಕರಣವನ್ನು ಪರಿಷತ್ತಿಗೆ ಹಿಂದಕ್ಕೆ ಕಳಿಸಬಹುದು ;

(ಡಿ) ಉಚ್ಚ ನ್ಯಾಯಾಲಯವು ಯುಕ್ತವೆಂದು ಯೋಚಿಸುವಂಥ ಇತರ ಆದೇಶವನ್ನು ಮಾಡಬಹುದು :

ಪರಂತು, ಪರಿಷತ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಪರಿಷತ್ತಿನ ಯಾವುದೇ ಆದೇಶವನ್ನು ಮಾರ್ಪಾಟು ಮಾಡತಕ್ಕುದಲ್ಲ ಅಥವಾ ತಳ್ಳಿಹಾಕತಕ್ಕುದಲ್ಲ ಮತ್ತು ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡದ ಹೊರತು ದಂಡವನ್ನು ವಿಧಿಸುವ ಅಥವಾ ಅಧಿಕಗೊಳಿಸುವ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

**ವಿವರಣೆ :** - ಈ ಪ್ರಕರಣದಲ್ಲಿ; "ಉಚ್ಚ ನ್ಯಾಯಾಲಯ" ಮತ್ತು "ಸಂಸ್ಥೆಯ ಸದಸ್ಯ" ಎಂಬ ಪದಗಳು 21ನೇ ಪ್ರಕರಣದಲ್ಲಿರುವ ಅರ್ಥವನ್ನು ಹೊಂದಿರುತ್ತವೆ.

## ಅಧ್ಯಾಯ -IX

ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯ ವಿಸರ್ಜನೆ

**31. ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯ ವಿಸರ್ಜನೆ.**- ಈ ಅಧಿನಿಯಮದ ಪ್ರಾರಂಭದ ತರುವಾಯ ,-

(ಎ) ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯೆಂದು ಕರೆಯಲಾಗುವ ಕಂಪನಿಯು ವಿಸರ್ಜಿತಗೊಳ್ಳತಕ್ಕುದು ಮತ್ತು ಆ ತರುವಾಯ ಯಾವನೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ಅವಶ್ಯಕವಾಗಬಹುದಾದಷ್ಟು ಮಟ್ಟಿಗೆ ಹೊರತು, ವಿಸರ್ಜಿತ ಕಂಪನಿಯ ವಿರುದ್ಧ ಅಥವಾ ಅದರ ಯಾವನೇ ಅಧಿಕಾರಿಯ ವಿರುದ್ಧ , ಅವನು ಅಂಥ ಅಧಿಕಾರಿಯಾಗಿರುವ ಸಾಮರ್ಥ್ಯದಲ್ಲಿ ಯಾವುದೇ ಕ್ಲೇಮುಗಳನ್ನು ಮಾಡತಕ್ಕುದಲ್ಲ ಅಥವಾ ಬೇಡಿಕೆಗಳನ್ನು ಒತ್ತಾಯಿಸತಕ್ಕುದಲ್ಲ ಅಥವಾ ವ್ಯವಹರಣೆಗಳನ್ನು ಕೈಗೊಳ್ಳತಕ್ಕುದಲ್ಲ ;

(ಬಿ) ವಿಸರ್ಜಿತ ಕಂಪನಿಯ ಬಗೆಗಿನ ಅಥವಾ ಅದಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ಸದಸ್ಯನ ಹಕ್ಕನ್ನು ಅಂತ್ಯಗೊಳಿಸತಕ್ಕುದು ಮತ್ತು ಆ ತರುವಾಯ ಆ ಕಂಪನಿಯ ಯಾವನೇ ಸದಸ್ಯನು ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ ಆ ಕಂಪನಿಯ ಸಂಬಂಧದಲ್ಲಿ ಯಾವುವೇ ಕ್ಲೇಮುಗಳನ್ನು ಮಾಡತಕ್ಕುದಲ್ಲ ಅಥವಾ ಬೇಡಿಕೆಗಳನ್ನು ಒತ್ತಾಯಿಸತಕ್ಕುದಲ್ಲ ಅಥವಾ ವ್ಯವಹರಣೆಗಳನ್ನು ಕೈಕೊಳ್ಳತಕ್ಕುದಲ್ಲ.

**32. ವಿಸರ್ಜಿತ ಕಂಪನಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸಂಸ್ಥೆಗೆ ವರ್ಗಾಯಿಸುವುದು.**- ಈ ಅಧಿನಿಯಮದ ಪ್ರಾರಂಭದ ತರುವಾಯ ವಿಸರ್ಜಿತ ಕಂಪನಿಯ ಎಲ್ಲಾ ಆಸ್ತಿಗಳು ಮತ್ತು

ಹೊಣೆಗಾರಿಕೆಗಳು ಸಂಸ್ಥೆಗೆ ವರ್ಗಾಯಿತವಾಗಿರತಕ್ಕುದು ಮತ್ತು ಅವುಗಳು ಅದರಲ್ಲಿ ನಿಹಿತವಾಗಿರತಕ್ಕುದು.

(2) ವಿಸರ್ಜಿತ ಕಂಪನಿಯ ಆಸ್ತಿಗಳು ವಿಶೇಷವಾಗಿ ನಗದು ಶಿಲ್ಕುಗಳು, ಮೀಸಲು ನಿಧಿಗಳು, ಹೂಡಿಕೆಗಳು, ಠೇವಣಿಗಳು, ಮತ್ತು ವಿಸರ್ಜಿತ ಕಂಪನಿಯ ಸ್ವಾಧೀನದಲ್ಲಿರಬಹುದಾದಂಥ ಸ್ವತ್ತಿನಲ್ಲಿನ ಅಥವಾ ಅದರಿಂದ ಉದ್ಭವಿಸುವ ಎಲ್ಲಾ ಇತರ ಹಿತಾಸಕ್ತಿಗಳು ಮತ್ತು ಹಕ್ಕುಗಳೂ ಸೇರಿ ಆ ಕಂಪನಿಯ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು ಮತ್ತು ಎಲ್ಲ ಚರ ಅಥವಾ ಸ್ಥಿರ ಸ್ವತ್ತನ್ನು ಮತ್ತು ವಿಸರ್ಜಿತ ಕಂಪನಿಯ ಎಲ್ಲ ಲೆಕ್ಕ ಪುಸ್ತಕಗಳು, ಕಾಗದ ಪತ್ರಗಳು ಅಥವಾ ದಸ್ತಾವೇಜುಗಳನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು ಮತ್ತು ಹೊಣೆಗಾರಿಕೆಗಳು ಆಗ ಇರುವ ಆ ಕಂಪನಿಯ ಯಾವುದೇ ಬಗೆಯ ಎಲ್ಲಾ ಋಣಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳನ್ನು ಒಳಗೊಳ್ಳುವುದಾಗಿ ಭಾವಿಸತಕ್ಕುದು.

(3) ವಿಸರ್ಜಿತ ಕಂಪನಿಯು ಪಕ್ಷಕಾರವಾಗಿರುವ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಅಥವಾ ಪರಿಣಾಮಕಾರಿಯಾಗಿರುವ ಯಾವುದೇ ಸ್ವರೂಪದ ಎಲ್ಲಾ ಕರಾರುಗಳು, ಋಣಗಳು, ಬಂಧಪತ್ರಗಳು, ಒಪ್ಪಂದಗಳು ಮತ್ತು ಇತರ ಲಿಖಿತಗಳು ಸಂದರ್ಭಾನುಸಾರ ಸಂಸ್ಥೆಯ ವಿರುದ್ಧವಾಗಿ ಅಥವಾ ಪರವಾಗಿ ಪೂರ್ಣವಾಗಿ ಜಾರಿಯಲ್ಲಿರತಕ್ಕುದು ಮತ್ತು ಪರಿಣಾಮಕಾರಿಯಾಗಿರತಕ್ಕುದು ಮತ್ತು ವಿಸರ್ಜಿತ ಕಂಪನಿಯ ಬದಲಾಗಿ ಈ ಸಂಸ್ಥೆಯು ಅವುಗಳಿಗೆ ಪಕ್ಷಕಾರವಾಗಿದ್ದರೆ ಹೇಗೋ ಹಾಗೆ ಅವುಗಳನ್ನು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು.

(4) ಈ ಅಧಿನಿಯಮದ ಪ್ರಾರಂಭಕ್ಕೆ ವಿಸರ್ಜಿತ ಕಂಪನಿಯ ಅಥವಾ ಅದರ ವಿರುದ್ಧದ ಯಾವುದೇ ಸ್ವರೂಪದ ಯಾವುದೇ ದಾವೆ, ಅಪೀಲು ಅಥವಾ ಇತರ ಕಾನೂನು ವ್ಯವಹರಣೆಯು ಇತ್ಯರ್ಥದಲ್ಲಿದ್ದರೆ, ಅವು ವಿಸರ್ಜಿತ ಕಂಪನಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಈ ಸಂಸ್ಥೆಗೆ ವರ್ಗಾಯಿಸಿದ ಕಾರಣದಿಂದ ಅಥವಾ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿರುವ ಕಾರಣದಿಂದ ಕೊನೆಗೊಳ್ಳತಕ್ಕುದಲ್ಲ, ಮುಂದುವರೆಯದಿರತಕ್ಕದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲ ಪರಿಣಾಮಕ್ಕೆ ಗುರಿಯಾಗತಕ್ಕುದಲ್ಲ, ಆದರೆ ಆ ದಾವೆಯನ್ನು, ಅಪೀಲನ್ನು ಅಥವಾ ಇತರ ವ್ಯವಹರಣೆಯನ್ನು, ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ವಿಸರ್ಜಿತ ಕಂಪನಿಯು ಅಥವಾ ಅದರ ವಿರುದ್ಧ ಯಾವ ರೀತಿಯಲ್ಲಿ ಮತ್ತು ಎಷ್ಟುಮಟ್ಟಿಗೆ ಮುಂದುವರಿಸಬಹುದಾಗಿತ್ತೋ, ಜರುಗಿಸಬಹುದಾಗಿತ್ತೋ ಮತ್ತು ಜಾರಿಗೊಳಿಸಬಹುದಾಗಿತ್ತೋ, ಅದೇ ರೀತಿಯಲ್ಲಿ ಮತ್ತು ಅಷ್ಟೇಮಟ್ಟಿಗೆ ಅದನ್ನು ಈ ಸಂಸ್ಥೆಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಜರುಗಿಸಬಹುದು, ಜಾರಿಗೊಳಿಸಬಹುದು.

**33. ವಿಸರ್ಜಿತ ಕಂಪನಿಯ ನೌಕರರಿಗೆ ಸಂಬಂಧಿಸಿದ ಉಪಬಂಧ.**- (1) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ವಿಸರ್ಜಿತ ಕಂಪನಿಯಲ್ಲಿ ನಿಯೋಜಿತನಾಗಿದ್ದ ಮತ್ತು ಅದರ ನಿಯೋಜನೆಯಲ್ಲಿ ಮುಂದುವರಿಯುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಪ್ರಾರಂಭದಿಂದ ಸಂಸ್ಥೆಯ ಒಬ್ಬ ನೌಕರನಾಗತಕ್ಕುದು, ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಯಾವ ಅವಧಿಯವರೆಗೆ ಯಾವ ಷರತ್ತುಗಳು ಮತ್ತು ನಿಬಂಧನೆಗಳ ಮೇರೆಗೆ ಮತ್ತು ನಿವೃತ್ತಿ ವೇತನ ಮತ್ತು ಉಪದಾನದ ಬಗ್ಗೆ ಯಾವ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಅವನು ಹೊಂದಿರುತ್ತಿದ್ದನೋ ಅದೇ ಅವಧಿಯವರೆಗೆ ಮತ್ತು ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಆ ಸಂಸ್ಥೆಯಲ್ಲಿ ತನ್ನ ಪದ ಅಥವಾ ಸೇವೆಯನ್ನು ಹೊಂದಿರತಕ್ಕುದು, ಮತ್ತು ಸಂಸ್ಥೆಯಲ್ಲಿನ ತನ್ನ ನಿಯೋಜನೆಯನ್ನು ಕೊನೆಗೊಳಿಸುವ ಹೊರತು ಮತ್ತು ಅಲ್ಲಿಯವರೆಗೆ ಅಥವಾ ಸಂಸ್ಥೆಯು ಅವನ ಪರಿಶ್ರಮಧನ, ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಯುಕ್ತವಾಗಿ ಮಾರ್ಪಡಿಸುವವರೆಗೆ ಅವನು ಅದನ್ನು ಹಾಗೆ ಹೊಂದಿರುವುದು ಮುಂದುವರಿಯತಕ್ಕುದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಿಸರ್ಜಿತ ಕಂಪನಿಯ ಯಾವನೇ ನೌಕರನ ಸೇವೆಗಳನ್ನು ಸಂಸ್ಥೆಗೆ ವರ್ಗಾಯಿಸುವ ಕಾರಣದಿಂದ ಅವನು ಆ ಅಧಿನಿಯಮ

ಅಥವಾ ಇತರ ಕಾನೂನಿನ ಮೇರೆಗೆ ಯಾವುದೇ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕುದಲ್ಲ ಮತ್ತು ಯಾವುದೇ ಅಂಥ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಸ್ವೀಕರಿಸತಕ್ಕುದಲ್ಲ.

## ಅಧ್ಯಾಯ –X

### ಸಂಕೀರ್ಣ

**34. ರಿಜಿಸ್ಟರಿನಲ್ಲಿ ಮಾರ್ಪಾಟು ಮತ್ತು ಪ್ರಮಾಣಪತ್ರದ ರದ್ದಿಯಾತಿ.**– (1) ಈ ಅಧಿನಿಯಮದ ಮೇರೆಗೆ ಒಬ್ಬ ಸದಸ್ಯನಿಗೆ ವಾಗ್ದಂಡನೆ ವಿಧಿಸುವ ಆದೇಶವನ್ನು ಮಾಡಿರುವಲ್ಲಿ, ರಿಜಿಸ್ಟರಿನಲ್ಲಿ ಅವನ ಹೆಸರಿನ ಮುಂದೆ ಆ ಶಿಕ್ಷೆಯನ್ನು ದಾಖಲು ಮಾಡತಕ್ಕುದು.

(2) ಯಾವನೇ ಸದಸ್ಯನ ಹೆಸರನ್ನು ತೆಗೆದುಹಾಕಿರುವಲ್ಲಿ, ಈ ಅಧಿನಿಯಮದ ಮೇರೆಗೆ ಅವನಿಗೆ ನೀಡಿದ ವೃತ್ತೀಯ ಪ್ರಮಾಣ ಪತ್ರವನ್ನು ವಾಪಸ್ಸು ತೆಗೆದುಕೊಳ್ಳತಕ್ಕುದು ಮತ್ತು ಅದನ್ನು ರದ್ದುಗೊಳಿಸತಕ್ಕುದು.

**35. ಕೇಂದ್ರ ಸರ್ಕಾರದ ನಿರ್ದೇಶನಗಳು.**– (1) ಕೇಂದ್ರ ಸರ್ಕಾರವು ಕಾಲಕಾಲಕ್ಕೆ, ಈ ಅಧಿನಿಯಮದ ಉದ್ದೇಶಗಳ ಈಡೇರಿಕೆಗೆ ಅನುಕೂಲಕರವಾಗುವುದೆಂದು ಅದು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಪರಿಷತ್ತಿಗೆ ನೀಡಬಹುದು ಮತ್ತು ಪರಿಷತ್ತು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಯಾವುವೇ ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕುದು.

(2) (1)ನೇ ಉಪ–ಪ್ರಕರಣದ ಮೇರೆಗೆ ನೀಡಿದ ನಿರ್ದೇಶನಗಳು, ಪರಿಷತ್ತು ಯಾವುವೇ ವಿನಿಯಮಗಳನ್ನು ರಚಿಸುವ ಅಥವಾ ಈಗಾಗಲೇ ರಚಿಸಿದ ಯಾವುವೇ ವಿನಿಯಮಗಳನ್ನು ತಿದ್ದುಪಡಿ ಮಾಡುವ ಅಥವಾ ರದ್ದು ಪಡಿಸುವ ನಿರ್ದೇಶನಗಳನ್ನು ಒಳಗೊಂಡಿರಬಹುದು.

(3) ಈ ಪ್ರಕರಣದ ಮೇರೆಗೆ ನೀಡಲಾದ ನಿರ್ದೇಶನಗಳನ್ನು ಪರಿಷತ್ತು ಕಾರ್ಯಗತಗೊಳಿಸುವಲ್ಲಿ ನಿರಂತರವಾಗಿ ತಪ್ಪಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಆ ಸರ್ಕಾರವು, ಅದರ ವಾದವನ್ನು ಮಂಡಿಸಲು ಅವಕಾಶವನ್ನು ನೀಡಿದ ತರುವಾಯ, ಆದೇಶದ ಮೂಲಕ ಪರಿಷತ್ತನ್ನು ವಿಸರ್ಜಿಸಬಹುದು ; ಆ ತರುವಾಯ ಈ ಅಧಿನಿಯಮದ ಉಪಬಂಧಗಳನುಸಾರ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಹೊಸ ಪರಿಷತ್ತನ್ನು ರಚಿಸತಕ್ಕುದು.

(4) ಕೇಂದ್ರ ಸರ್ಕಾರವು (3)ನೇ ಉಪ–ಪ್ರಕರಣದ ಮೇರೆಗೆ ಪರಿಷತ್ತನ್ನು ವಿಸರ್ಜಿಸಿ ಆದೇಶ ಹೊರಡಿಸಿರುವಲ್ಲಿ, ಈ ಅಧಿನಿಯಮದ ಉಪಬಂಧಗಳನುಸಾರ ಹೊಸ ಪರಿಷತ್ತನ್ನು ರಚಿಸುವವರೆಗೆ ಕೇಂದ್ರ ಸರ್ಕಾರವು ಆ ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ಮತ್ತು ಈ ಬಗ್ಗೆ ಆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರಕಾರ್ಯಗಳನ್ನು ಚಲಾಯಿಸಲು ಯಾವನೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು ಅಧಿಕೃತಗೊಳಿಸಬಹುದು.

**36. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.**– ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ವಿನಿಯಮಗಳು ಅಥವಾ ಆದೇಶಗಳನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಅಥವಾ ಪರಿಷತ್ತಿನ ವಿರುದ್ಧ ಯಾವುದೇ ದಾವೆ, ಕಾನೂನು ಕ್ರಮ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶ ಇರತಕ್ಕುದಲ್ಲ.

**37. ಶಾಖಾ ಕಚೇರಿಗಳ ನಿರ್ವಹಣೆ.**– (1) ವೃತ್ತಿಯಲ್ಲಿರುವ ಒಬ್ಬ ಕಂಪನಿ ಕಾರ್ಯದರ್ಶಿಯು ಅಥವಾ ಅಂಥ ಕಂಪನಿ ಕಾರ್ಯದರ್ಶಿಗಳ ಒಂದು ಫರ್ಮು ಭಾರತದಲ್ಲಿ ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ಹೊಂದಿರುವಲ್ಲಿ , ಅಂಥ ಕಚೇರಿಗಳ ಪೈಕಿ ಪ್ರತಿಯೊಂದು ಕಚೇರಿಯು ಸಂಸ್ಥೆಯ ಒಬ್ಬ ಸದಸ್ಯನ ಪ್ರತ್ಯೇಕ ಪ್ರಭಾರದಲ್ಲಿ ಇರತಕ್ಕುದು :

ಪರಂತು, ಪರಿಷತ್ತು ಸೂಕ್ತ ಸಂದರ್ಭದಲ್ಲಿ ವೃತ್ತಿಯಲ್ಲಿರುವ ಯಾವನೇ ಕಂಪನಿ ಕಾರ್ಯದರ್ಶಿ ಅಥವಾ ಅಂಥ ಕಂಪನಿ ಕಾರ್ಯದರ್ಶಿಗಳ ಫರ್ಮನ್ನು ಈ ಉಪ-ಪ್ರಕರಣದ ಅನ್ವಯದಿಂದ ವಿನಾಯಿತಿಗೊಳಿಸಬಹುದು.

(2) ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ನಿರ್ವಹಿಸುತ್ತಿರುವ ಮತ್ತು ವೃತ್ತಿಯಲ್ಲಿರುವ ಪ್ರತಿಯೊಬ್ಬ ಕಂಪನಿ ಕಾರ್ಯದರ್ಶಿಯು ಅಥವಾ ಅಂಥ ಕಂಪನಿ ಕಾರ್ಯದರ್ಶಿಗಳ ಪ್ರತಿಯೊಂದು ಫರ್ಮು, ಕಚೇರಿಗಳ ಮತ್ತು ಅವುಗಳ ಪ್ರಭಾರದಲ್ಲಿರುವ ವ್ಯಕ್ತಿಗಳ ಪಟ್ಟಿಯನ್ನು ಪರಿಷತ್ತಿಗೆ ಕಳುಹಿಸತಕ್ಕುದು ಮತ್ತು ಅವುಗಳ ಸಂಬಂಧದಲ್ಲಿನ ಯಾವುವೇ ಬದಲಾವಣೆಗಳನ್ನು ಪರಿಷತ್ತಿಗೆ ತಿಳಿಸತಕ್ಕುದು.

**38. ಪರಸ್ಪರತೆ.**- (1) ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚಿಸಿದ ಯಾವುದೇ ದೇಶವು, ಭಾರತೀಯ ಅಧಿವಾಸ ಹೊಂದಿರುವ ವ್ಯಕ್ತಿಗಳು ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಸಂಸ್ಥೆಗೆ ಸಮನಾದ ಯಾವುದೇ ಸಂಸ್ಥೆಯ ಸದಸ್ಯರಾಗಲು ಅಥವಾ ಕಂಪನಿ ಕಾರ್ಯದರ್ಶಿ ವೃತ್ತಿಯನ್ನು ನಡೆಸಲು ಅಡ್ಡಿ ಪಡಿಸಿದಲ್ಲಿ ಅಥವಾ ಅವರನ್ನು ಆ ದೇಶದಲ್ಲಿ ಅನುಚಿತ ತಾರತಮ್ಯಕ್ಕೆ ಒಳಪಡಿಸಿದಲ್ಲಿ ಅಂಥ ಯಾವುದೇ ದೇಶದ ಯಾವನೇ ಪ್ರಜೆಯು ಭಾರತದಲ್ಲಿ ಸಂಸ್ಥೆಯ ಸದಸ್ಯನಾಗಲು ಅಥವಾ ಕಂಪನಿ ಕಾರ್ಯದರ್ಶಿಗಳ ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಪರಿಷತ್ತು, ಕಂಪನಿ ಕಾರ್ಯದರ್ಶಿತ್ವಕ್ಕೆ ಸಂಬಂಧಿಸಿದ ವಿದೇಶಿ ವಿದ್ಯಾರ್ಹತೆಗಳು ಏನಾದರೂ ಇದ್ದರೆ, ಅವುಗಳನ್ನು ಷರತ್ತುಗಳನ್ನು ಗೊತ್ತುಪಡಿಸಿ ನೋಂದಣಿ ಪುಸ್ತಕದಲ್ಲಿ ನಮೂದನೆಯ ಉದ್ದೇಶಗಳಿಗಾಗಿ ಮಾನ್ಯ ಮಾಡತಕ್ಕುದು.

**39. ವಿನಿಯಮ ರಚನಾಧಿಕಾರ.**- (1) ಪರಿಷತ್ತು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳ ಈಡೇರಿಕೆಗಾಗಿ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಿಲ್ಲದಂತೆ, ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ವಿಷಯಗಳ ಅಥವಾ ಅವುಗಳಲ್ಲಿ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 2ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಮತ್ತು ಮೊದಲನೇ ಅನುಸೂಚಿಯ ಭಾಗ ೪ ರ ಬಾಬು (1),(3) ಮತ್ತು (4) ಇವುಗಳ ಅಡಿಯಲ್ಲಿ ಮನ್ನಣೆ ಕೊಡಬಹುದಾದ ವೃತ್ತಿಗಳು ;

(ಬಿ) 4ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ),(ಡಿ) ಮತ್ತು (ಇ) ಖಂಡಗಳ ಉದ್ದೇಶಗಳಿಗಾಗಿ ನಡೆಸಲಾಗುವ ಪರೀಕ್ಷೆಗಳು ಮತ್ತು ತರಬೇತಿ ;

(ಸಿ) 4ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಥವಾ 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮತ್ತು ಅದನ್ನು ಮಂಜೂರು ಮಾಡುವ ರೀತಿ ;

(ಡಿ) 4ನೇ ಪ್ರಕರಣದ (3)ನೇ ಉಪ-ಪ್ರಕರಣ, 5ನೇ ಪ್ರಕರಣದ (3)ನೇ ಉಪಪ್ರಕರಣ, 6ನೇ ಪ್ರಕರಣದ (3)ನೇ ಉಪಪ್ರಕರಣ, 15ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡ, 19ನೇ ಪ್ರಕರಣದ (4)ನೇ ಉಪಪ್ರಕರಣ ಮತ್ತು 20ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡ ಇವುಗಳ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ;

(ಇ) 5ನೇ ಪ್ರಕರಣದ (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಅಗತ್ಯವಿರುವ ಅರ್ಹತೆಗಳು ಮತ್ತು ಪ್ರಾಯೋಗಿಕ ಅನುಭವ ;

(ಎಫ್) 6ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬಹುದಾದ ಅರ್ಜಿಯ ನಮೂನೆ ;

(ಜಿ) 10ನೇ ಪ್ರಕರಣದ ಮೇರೆಗೆ ಪರಿಷತ್ತಿನ ಚುನಾವಣೆಯನ್ನು ನಡೆಸಬಹುದಾದ ರೀತಿ ;

(ಎಚ್) 15ನೇ ಪ್ರಕರಣ ಮತ್ತು ಈ ಅಧಿನಿಯಮದ ಇತರ ಉಪಬಂಧಗಳ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಪರಿಷತ್ತು ಕಾರ್ಯಕಲಾಪಗಳನ್ನು ನಡೆಸುವುದು ಮತ್ತು ಅಂಥ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ, ಪರಿಷತ್ತು ತನ್ನ ಸಭೆಗಳನ್ನು ಯಾವ ಸ್ಥಳದಲ್ಲಿ ಮತ್ತು

ಮಧ್ಯಂತರಗಳಲ್ಲಿ ನಡೆಸತಕ್ಕುದೋ ಆ ಸ್ಥಳ ಮತ್ತು ಮಧ್ಯಂತರಗಳು, ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಇತರ ವಿಷಯಗಳು ;

(ಐ) 15ನೇ ಪ್ರಕರಣದ (2)ನೇ ಉಪ-ಪ್ರಕರಣದ (ಡಿ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಸಂಸ್ಥೆಯ ಸದಸ್ಯರುಗಳ ವೃತ್ತೀಯ ಅರ್ಹತೆ, ಸ್ಥಾನಮಾನ ಮತ್ತು ಮಾನಕಗಳ ನಿಯಂತ್ರಣ ಮತ್ತು ನಿರ್ವಹಣೆ ;

(ಜೆ) 15ನೇ ಪ್ರಕರಣದ (2)ನೇ ಉಪ-ಪ್ರಕರಣದ ( ಜೆ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಕಂಪನಿ ಕಾರ್ಯದರ್ಶಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನೆಯನ್ನು ನಡೆಸುವುದು ;

(ಕೆ) 15ನೇ ಪ್ರಕರಣದ (2)ನೇ ಉಪ-ಪ್ರಕರಣದ ( ಕೆ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಕಂಪನಿಗಳ ವ್ಯವಸ್ಥಾಪನೆ ಮತ್ತು ಸಂಬಂಧಪಟ್ಟ ವಿಷಯಗಳನ್ನು ಕುರಿತ ಗ್ರಂಥಾಲಯಗಳನ್ನು ನಡೆಸುವುದು ಮತ್ತು ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸುವುದು ;

(ಎಲ್) 15ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಂ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಶಿಸ್ತುಪಾಲನಾ ಅಧಿಕಾರಗಳನ್ನು ಚಲಾಯಿಸುವುದು ;

(ಎಂ) 17ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು ತಮ್ಮ ಕಾರ್ಯ ಕಲಾಪಗಳನ್ನು ನಡೆಸುವುದು ಮತ್ತು ಅಂಥ ಕಾರ್ಯಕಲಾಪಗಳನ್ನು ನಡೆಸಲು ಅಂಥ ಸಮಿತಿಗಳು ಯಾವ ಸ್ಥಳಗಳಲ್ಲಿ ಮತ್ತು ಮಧ್ಯಂತರಗಳಲ್ಲಿ ತಮ್ಮ ಸಭೆಗಳನ್ನು ನಡೆಸತಕ್ಕುದೋ ಅಂಥ ಸ್ಥಳಗಳು ಮತ್ತು ಮಧ್ಯಂತರಗಳು ಮತ್ತು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಎಲ್ಲಾ ವಿಷಯಗಳು ;

(ಎನ್) 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಿಜಿಸ್ಟರನ್ನು ಇಡಬಹುದಾದ ರೀತಿ ;

(ಒ) 19ನೇ ಪ್ರಕರಣದ (2)ನೇ ಉಪ-ಪ್ರಕರಣದ (ಇ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ರಿಜಿಸ್ಟರಿನಲ್ಲಿ ಸೇರಿಸಬೇಕಾದ ಇತರ ವಿಷಯಗಳು ;

(ಪಿ) 19ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸಂಸ್ಥೆಯ ಸದಸ್ಯರ ವಾರ್ಷಿಕ ಪಟ್ಟಿಯನ್ನು ಪ್ರಕಟಿಸಬಹುದಾದ ರೀತಿ ;

(ಕ್ಯೂ) 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನಡೆಸಬೇಕಾದ ವಿಚಾರಣೆಗಳು ;

(ಆರ್) 23ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಪ್ರಾದೇಶಿಕ ಪರಿಷತ್ತನ್ನು ರಚಿಸಬಹುದಾದ ರೀತಿ ಮತ್ತು ಅದರ ಪ್ರಕಾರ್ಯಗಳು ;

(ಎಸ್) 38ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ವಿದೇಶೀ ಅರ್ಹತೆಗಳಿಗೆ ಮನ್ನಣೆ ನೀಡಬಹುದೋ ಆ ಷರತ್ತುಗಳು ;

(ಟಿ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಪರಿಷತ್ತು ರಚಿಸಿದ ಎಲ್ಲಾ ವಿನಿಯಮಗಳು ಪೂರ್ವ ಪ್ರಕಟಣೆಯ ಷರತ್ತಿಗೆ ಮತ್ತು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟಿರತಕ್ಕುದು.

(4) ಪರಿಷತ್ತು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಆ ಸರ್ಕಾರವು ಆ ವಿನಿಯಮದ ಒಂದು ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡುವಂತೆ ಮಾಡತಕ್ಕುದು ಮತ್ತು ಮೇಲೆ ಹೇಳಲಾದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ

ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ವಿನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕುದಲ್ಲ.

## ಮೊದಲನೇ ಅನುಸೂಚಿ

**[21 (4) ಮತ್ತು 22ನೇ ಪ್ರಕರಣಗಳನ್ನು ನೋಡಿ]**

### ಭಾಗ-I

### ವೃತ್ತಿಯಲ್ಲಿರುವ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದ ವೃತ್ತೀಯ ದುರ್ನಡತೆ

ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯು—

(1) ಯಾವನೇ ಇತರ ವ್ಯಕ್ತಿಗೆ ಅವನು ಕಂಪನಿ ಕಾರ್ಯದರ್ಶಿಯಾಗಿದ್ದ ಹೊರತು ಅಥವಾ ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಇತರ ಮನ್ನಣೆ ಪಡೆದ ವೃತ್ತಿಯ ಸದಸ್ಯನಾಗಿದ್ದ ಹೊರತು ಮತ್ತು ಅವನು ಪಾಲುದಾರನಾಗಿದ್ದ ಅಥವಾ ಅವನ ನಿಯೋಜನೆಯಲ್ಲಿದ್ದ ಹೊರತು ಅಂಥ ಯಾವನೇ ವ್ಯಕ್ತಿಗೆ ತನ್ನ ಹೆಸರಿನಲ್ಲಿ ಕಂಪನಿ ಕಾರ್ಯದರ್ಶಿಯಾಗಿ ವೃತ್ತಿ ನಡೆಸಲು ಅನುಮತಿಸಿದರೆ ;

(2) ಸಂಸ್ಥೆಯ ಸದಸ್ಯ ಅಥವಾ ಪಾಲುದಾರ ಅಥವಾ ನಿವೃತ್ತ ಪಾಲುದಾರ ಅಥವಾ ಮೃತ ಪಾಲುದಾರನ ಕಾನೂನು ಸಮ್ಮತ ಪ್ರತಿನಿಧಿಯ ಹೊರತಾದ ಯಾವನೇ ಇತರ ವ್ಯಕ್ತಿಗೆ ತನ್ನ ವೃತ್ತಿ ಕಾರ್ಯದ ಫೀಜುಗಳು ಅಥವಾ ಲಾಭಗಳಲ್ಲಿ ಯಾವುದೇ ಪಾಲು, ಕಮಿಷನ್ ಅಥವಾ ದಳ್ಳಾಳಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದರೆ ಅಥವಾ ಅದಕ್ಕೆ ಅನುಮತಿಸಿದರೆ ಅಥವಾ ಸಂದಾಯ ಮಾಡಲು ಅಥವಾ ಅದಕ್ಕೆ ಅನುಮತಿಸಲು ಒಪ್ಪಿಕೊಂಡರೆ,

- ಕಂಪನಿ ಕಾರ್ಯದರ್ಶಿಯನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕುದು.

**ವಿವರಣೆ :-** ಈ ಬಾಬಿನಲ್ಲಿ "ಪಾಲುದಾರ" ಎಂಬ ಪದವು ಭಾರತದ ಹೊರಗೆ ವಾಸಿಸುವ ಯಾವ ವ್ಯಕ್ತಿಯೊಡನೆ ವೃತ್ತಿಯಲ್ಲಿರುವ ಕಂಪನಿಯ ಕಾರ್ಯದರ್ಶಿಯು ಈ ಭಾಗದ (4)ನೇ ಬಾಬನ್ನು ಉಲ್ಲಂಘಿಸದೆ ಪಾಲುದಾರನಾಗಿರುವನೋ ಆ ವ್ಯಕ್ತಿಯನ್ನು ಒಳಗೊಳ್ಳುತ್ತದೆ

ಮತ್ತು ವೃತ್ತಿಯಲ್ಲಿರುವ ಆ ಕಂಪನಿ ಕಾರ್ಯದರ್ಶಿಯು —

(3) ಸಂಸ್ಥೆಯ ಸದಸ್ಯನಿಂದ ಅಥವಾ ಆ ಉದ್ದೇಶಕ್ಕಾಗಿ ನಿಯಮಿಸಲಾದ ಮನ್ನಣೆ ಪಡೆದ ವೃತ್ತಿಗಳಲ್ಲಿ ಯಾವುದೇ ವೃತ್ತಿಗೆ ಸೇರಿದ ಯಾವನೇ ವ್ಯಕ್ತಿಯಿಂದ ಹೊರತು ವೃತ್ತಿ ಸ್ವರೂಪದ್ದಲ್ಲದ ಕಾರ್ಯದಿಂದ ಬರುವ ಲಾಭಗಳು, ಫೀಜುಗಳು ಅಥವಾ ಇತರ ಪರಿಶ್ರಮಧನದ ಯಾವುದೇ ಭಾಗವನ್ನು ಸ್ವೀಕರಿಸಿದರೆ ಅಥವಾ ಸ್ವೀಕರಿಸಲು ಒಪ್ಪಿದರೆ ;

(4) ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯಲ್ಲದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ಮನ್ನಣೆ ಪಡೆದ ವೃತ್ತಿಯ ಸದಸ್ಯನಲ್ಲದ ಯಾವನೇ ವ್ಯಕ್ತಿಯು ಅಥವಾ ಭಾರತದ ಹೊರಗೆ ನಿವಾಸಿಯಾಗಿರುವ ಯಾವ ವ್ಯಕ್ತಿಯು ಪರದೇಶದಲ್ಲಿ ನಿವಾಸಿಯಾಗಿರದಿದ್ದರೆ 4ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ಈ ಸಂಸ್ಥೆಯ ಸದಸ್ಯನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಬಹುದಾಗಿತ್ತೋ ಅಥವಾ ಆ ಯಾವ ವ್ಯಕ್ತಿಯ ಅರ್ಹತೆಗಳನ್ನು ಕೇಂದ್ರ ಸರ್ಕಾರವು ಅಥವಾ ಪರಿಷತ್ತು ಈ ಸಂಸ್ಥೆಯ ಸದಸ್ಯತ್ವದ ಉದ್ದೇಶಕ್ಕಾಗಿ ಮನ್ನಣೆ ಮಾಡಿರುವುದೋ ಆ ವ್ಯಕ್ತಿಯ ಹೊರತಾಗಿ ಯಾವನೇ ಇತರ ವ್ಯಕ್ತಿಯೊಡನೆ ಪಾಲುದಾರನಾದರೆ, ಮತ್ತು ಕಂಪನಿ ಕಾರ್ಯದರ್ಶಿಯು ಭಾರತದಲ್ಲಿ ಮತ್ತು ಭಾರತದ ಹೊರಗಡೆ ಪಾಲುಗಾರಿಕೆಯ ವೃತ್ತಿ ಕಾರ್ಯದ ಫೀಜು ಅಥವಾ ಲಾಭಗಳಲ್ಲಿ ಪಾಲುದಾರನಾದರೆ ;

(5) ಅವನ ಪಾಲುದಾರನಾಗಲು ಅರ್ಹನಲ್ಲದ ವ್ಯಕ್ತಿಯ ಸೇವೆಯ ಮೂಲಕ ಅಥವಾ ಕಂಪನಿ ಕಾರ್ಯದರ್ಶಿಗೆ ಅವಕಾಶವಿಲ್ಲದ ಯಾವುದೇ ಸಾಧನದ ಮೂಲಕ ಯಾವುದೇ ವೃತ್ತಿ ಕಾರ್ಯವನ್ನು ದೊರಕಿಸಿಕೊಂಡರೆ ;

(6) ಸುತ್ತೋಲೆ, ಜಾಹಿರಾತು, ವೈಯಕ್ತಿಕ ಸಂಪರ್ಕ ಅಥವಾ ಸಂದರ್ಶನದ ಮೂಲಕ ಅಥವಾ ಯಾವುದೇ ಇತರ ಸಾಧನದ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ಗ್ರಾಹಕರನ್ನು ಅಥವಾ ವೃತ್ತಿ ಕಾರ್ಯವನ್ನು ಕೋರಿದರೆ ;

(7) ತನ್ನ ವೃತ್ತಿಯ ಸಾಧನೆಗಳು ಅಥವಾ ಸೇವೆಗಳ ಬಗ್ಗೆ ಜಾಹೀರಾತು ನೀಡಿದರೆ ಅಥವಾ ಭಾರತದಲ್ಲಿ ಕಾನೂನು ಮೂಲಕ ಸ್ಥಾಪನೆಗೊಂಡ ವಿಶ್ವವಿದ್ಯಾನಿಲಯದ ಅಥವಾ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಪದವಿ ಆಗಿದ್ದ ಹೊರತು ಅಥವಾ ಕೇಂದ್ರ ಸರ್ಕಾರವು ಮನ್ನಣೆ ನೀಡಿದ ಅಥವಾ ಪರಿಷತ್ತು ಮನ್ನಣೆ ನೀಡಬಹುದಾದ ಈ ಸಂಸ್ಥೆಯ ಅಥವಾ ಯಾವುದೇ ಇತರ ಸಂಸ್ಥೆಯ ಹೆಸರನ್ನು ಸೂಚಿಸುವ ಬಿರುದು ಆಗಿದ್ದ ಹೊರತು ಕಂಪನಿ ಕಾರ್ಯದರ್ಶಿ ಎಂಬ ಪದನಾಮವನ್ನು ಅಥವಾ ಪದಾವಳಿಯನ್ನು ಹೊರತುಪಡಿಸಿ ಯಾವುದೇ ಪದನಾಮವನ್ನು ಅಥವಾ ಪದಾವಳಿಯನ್ನು ವೃತ್ತಿ ದಾಖಲೆಗಳು, ಸಂದರ್ಶನ ಚೀಟಿಗಳು, ವಿಳಾಸದೋಲೆಗಳು ಅಥವಾ ನಾಮಫಲಕಗಳ ಮೇಲೆ ಬಳಸಿದರೆ;

(8) ವೃತ್ತಿಯಲ್ಲಿರುವ ಇನ್ನೊಬ್ಬ ಕಂಪನಿ ಕಾರ್ಯದರ್ಶಿಯು ಈ ಹಿಂದೆ ಧಾರಣ ಮಾಡಿದ್ದ ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯ ಸ್ಥಾನವನ್ನು ಅವನಿಗೆ ಮುಂಚಿತವಾಗಿ ಲಿಖಿತದಲ್ಲಿ ತಿಳಿಸದೆ ಅಂಗೀಕರಿಸಿದರೆ ;

(9) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ವಿನಿಯಮಗಳ ಮೇರೆಗೆ ಅನುಮತಿಸಲಾದ ಸಂದರ್ಭಗಳಲ್ಲಿ ಹೊರತು ಲಾಭದ ಶೇಕಡಾವಾರನ್ನು ಆಧರಿಸಿರುವ ಅಥವಾ ನಿಯೋಜನೆಯ ನಿರ್ಣಯಗಳು ಅಥವಾ ಫಲಿತಾಂಶಗಳು ಆಕಸ್ಮಿಕಗಳ ಸಂದರ್ಭಗಳನ್ನು ಆಧರಿಸಿರುವಂಥ ಯಾವುದೇ ವೃತ್ತೀಯ ನಿಯೋಜನಾ ಫೀಜುಗಳಿಗೆ ಸಂಬಂಧಿಸಿದಂತೆ ವಿಧಿಸಿದರೆ ಅಥವಾ ವಿಧಿಸಲು ಪ್ರಸ್ತಾವಿಸಿದರೆ, ಅಂಗೀಕರಿಸಿದರೆ ಅಥವಾ ಅಂಗೀಕರಿಸಲು ಪ್ರಸ್ತಾವಿಸಿದರೆ ;

(10) ಪರಿಷತ್ತಿನ ಮೂಲಕ ವಹಿಸಲಾದ, ಅನುಮತಿಸಿದುದನ್ನು ಹೊರತುಪಡಿಸಿ ಕಂಪನಿ ಕಾರ್ಯದರ್ಶಿ ವೃತ್ತಿಯ ಹೊರತಾದ ಇತರ ಯಾವುದೇ ವ್ಯವಹಾರ ಅಥವಾ ವೃತ್ತಿಯಲ್ಲಿ ತೊಡಗಲು ಪರಿಷತ್ತು ಅನುಮತಿಸಿದ ಹೊರತು ಹಾಗೆ ತೊಡಗಿದರೆ:

ಪರಂತು, ಇಲ್ಲಿ ಅಡಕವಾಗಿರುವುದು ಯಾವುದೂ, ಕಂಪನಿಗಳ ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ಹೊರತು ಕಂಪನಿಯ ನಿರ್ದೇಶಕನಾಗಿರಲು ಕಂಪನಿ ಕಾರ್ಯದರ್ಶಿಯನ್ನು ಹಕ್ಕಿಲ್ಲದಂತೆ ಮಾಡತಕ್ಕುದಲ್ಲ ;

(11) ವೃತ್ತಿಯಲ್ಲಿರುವ ಯಾವನೇ ಇತರ ಕಂಪನಿ ಕಾರ್ಯದರ್ಶಿಯು ಈ ಹಿಂದೆ ಧಾರಣ ಮಾಡಿದ್ದ ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯ ಸ್ಥಾನವನ್ನು ಕಡಿಮೆ ಸಂಬಳಕ್ಕೆ ಒಪ್ಪಿಕೊಳ್ಳುವಂಥ ಸನ್ನಿವೇಶಗಳಲ್ಲಿ ಅಂಗೀಕರಿಸಿದರೆ ;

(12) ವೃತ್ತಿಯಲ್ಲಿರುವ ಈ ಸಂಸ್ಥೆಯ ಸದಸ್ಯನಾಗಿಲ್ಲದ ವ್ಯಕ್ತಿಗೆ ಅಥವಾ ಅವನ ಪಾಲುದಾರನಾಗಿಲ್ಲದ ಸದಸ್ಯನಿಗೆ ಕಂಪನಿ ಕಾರ್ಯದರ್ಶಿಯಾಗಿ ಅವನು ಪ್ರಮಾಣೀಕರಿಸತಕ್ಕ ಯಾವುದೇ ದಾಖಲೆಗೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಇತರ ವಿವರ ಪತ್ರಗಳಿಗೆ ಅವನ ಪರವಾಗಿ ಅಥವಾ ಅವನ ಫರ್ಮಿನ ಪರವಾಗಿ ಸಹಿ ಹಾಕಲು ಅನುಮತಿಸಿದರೆ

–ವೃತ್ತಿ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕುದು.

## ಭಾಗ-II

### ಈ ಸಂಸ್ಥೆಯ ಸೇವೆಯಲ್ಲಿರುವ ಸದಸ್ಯರಿಗೆ ಸಂಬಂಧಿಸಿದಂತೆ ವೃತ್ತೀಯ ದುರ್ನಡತೆ

ಸಂಸ್ಥೆಯ ಸದಸ್ಯನು (ವೃತ್ತಿಯಲ್ಲಿರುವ ಸದಸ್ಯನ ಹೊರತಾದ) ಯಾವುದೇ ಕಂಪನಿಯ, ಫರ್ಮಿನ ಅಥವಾ ವ್ಯಕ್ತಿಯ ನೌಕರನಾಗಿದ್ದು-

(1) ಸದಸ್ಯನು ಕೈಗೊಂಡ ನಿಯೋಜನೆಯ ಉಪಲಬ್ಧಿಗಳಲ್ಲಿ ಯಾವುದೇ ಪಾಲನ್ನು ಯಾವನೇ ವ್ಯಕ್ತಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದರೆ ಅಥವಾ ಅನುಮತಿಸಿದರೆ ಅಥವಾ ಸಂದಾಯ ಮಾಡಲು ಒಪ್ಪಿದರೆ ;

(2) ಅಂಥ ಕಂಪನಿ, ಫರ್ಮು ಅಥವಾ ವ್ಯಕ್ತಿಯು ಅಥವಾ ಅಂಥ ಕಂಪನಿ, ಫರ್ಮು ಅಥವಾ ವ್ಯಕ್ತಿಯ ಏಜೆಂಟನು ಅಥವಾ ಗ್ರಾಹಕನು ನೇಮಿಸಿದ ನ್ಯಾಯವಾದಿ, ಕಂಪನಿ ಕಾರ್ಯದರ್ಶಿ ಅಥವಾ ದಲ್ಲಾಳಿಯಿಂದ ಕಮೀಷನ್ ಅಥವಾ ಪರಿತೋಷದ ರೂಪದಲ್ಲಿ ಫೀಜುಗಳ, ಲಾಭಗಳ ಅಥವಾ ಗಳಿಕೆಗಳ ಯಾವುದೇ ಭಾಗವನ್ನು ಸ್ವೀಕರಿಸಿದರೆ ಅಥವಾ ಸ್ವೀಕರಿಸಲು ಒಪ್ಪಿದರೆ ;

(3) ತನ್ನ ನಿಯೋಜನೆಯ ಅವಧಿಯಲ್ಲಿ ಪಡೆದ ರಹಸ್ಯ ಮಾಹಿತಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಗತ್ಯಪಡಿಸಲಾದಂತೆ ಅಥವಾ ಅವನ ನಿಯೋಜಕನು ಅನುಮತಿಸಿದಂತೆ ಹೊರತು ಅನ್ಯಥಾ ಬಹಿರಂಗ ಪಡಿಸಿದರೆ

--ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕುದು.

## ಭಾಗ-III

### ಸಾಮಾನ್ಯವಾಗಿ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದ ವೃತ್ತೀಯ ದುರ್ನಡತೆ

ಸಂಸ್ಥೆಯ ವೃತ್ತಿಯಲ್ಲಿರುವ ಅಥವಾ ಇಲ್ಲದಿರುವ ಸದಸ್ಯನು -

(1) ಪರಿಷತ್ತಿಗೆ ಸಲ್ಲಿಸಬೇಕಾದ ಯಾವುದೇ ವಿವರ ಪತ್ರ, ವಿವರಪಟ್ಟಿಕೆ ಅಥವಾ ನಮೂನೆಯಲ್ಲಿ ತಪ್ಪೆಂದು ತಿಳಿದಿರುವ ಯಾವುವೇ ವಿವರಗಳನ್ನು ಸೇರಿಸಿದರೆ ;

(2) ಅಧಿಸದಸ್ಯನಾಗಿಲ್ಲದೆ ಅಧಿಸದಸ್ಯನೆಂಬಂತೆ ತೋರಿಸಿಕೊಂಡರೆ ;

(3) ಪರಿಷತ್ತು ಅಥವಾ ಅದರ ಸಮಿತಿಗಳಲ್ಲಿ ಯಾವುದೇ ಸಮಿತಿಯು ಅಪೇಕ್ಷಿಸಿದ ಮಾಹಿತಿಯನ್ನು ಒದಗಿಸದಿದ್ದರೆ ಅಥವಾ ಕೇಳಿದ ಅಗತ್ಯತೆಗಳನ್ನು ಪಾಲಿಸದಿದ್ದರೆ ;

(4) ತನ್ನ ವೃತ್ತೀಯ ಸಾಮರ್ಥ್ಯದಲ್ಲಿ ಸ್ವೀಕರಿಸಿದ ಹಣವನ್ನು ಎತ್ತಿಹಾಕಿದರೆ ಅಥವಾ ಅಕ್ರಮವಾಗಿ ವಿನಿಯೋಗಿಸಿದರೆ,

-- ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕುದು.

## ಎರಡನೇ ಅನುಸೂಚಿ

[21(5) ಮತ್ತು 22ನೇ ಪ್ರಕರಣಗಳನ್ನು ನೋಡಿ]

## ಭಾಗ-I

## ವೃತ್ತಿಯಲ್ಲಿರುವ ಈ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಮೂಲಕ ಕ್ರಮವು ಅಗತ್ಯವಾಗುವ ವೃತ್ತೀಯ ದುರ್ನಡತೆ

ವೃತ್ತಿಯಲ್ಲಿರುವ ಕಂಪನಿ ಕಾರ್ಯದರ್ಶಿಯು,-

(1) ತನ್ನ ವೃತ್ತಿಯ ನೇಮಕಾತಿಯ ಅವಧಿಯಲ್ಲಿ ತಾನು ಪಡೆದ ಮಾಹಿತಿಯನ್ನು, ಹಾಗೆ ಅವನನ್ನು ನೇಮಿಸಿಕೊಂಡ ಕಕ್ಷಿದಾರನ ಹೊರತು ಇತರ ಯಾವನೇ ವ್ಯಕ್ತಿಗೆ ಅಂಥ ಕಕ್ಷಿದಾರನ ಸಮ್ಮತಿಯಿಲ್ಲದೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಗತ್ಯಪಡಿಸಿದಂತೆ ಹೊರತು, ಬಹಿರಂಗ ಪಡಿಸಿದರೆ ;

(2) ಕಂಪನಿ ಕಾರ್ಯದರ್ಶಿ ವೃತ್ತಿಗೆ ಸಂಬಂಧಿಸಿದ ವಿಷಯಗಳ ಪರಿಶೀಲನಾ ವರದಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿವರಣೆಗಳನ್ನು, ಅಂಥ ವಿವರಣೆಗಳ ಪರಿಶೀಲನೆಯನ್ನು ತಾನು ಅಥವಾ ಫರ್ಮಿನ ಪಾಲುದಾರನು ಅಥವಾ ಯಾವನೇ ನೌಕರನು ಅಥವಾ ವೃತ್ತಿಯಲ್ಲಿರುವ ಇನ್ನೊಬ್ಬ ಕಂಪನಿ ಕಾರ್ಯದರ್ಶಿಯು ಮಾಡಿದ್ದ ಹೊರತು ತನ್ನ ಹೆಸರಿನಲ್ಲಿ ಅಥವಾ ತನ್ನ ಫರ್ಮಿನ ಹೆಸರಿನಲ್ಲಿ ಅವುಗಳನ್ನು ಪ್ರಮಾಣೀಕರಿಸಿದರೆ ಅಥವಾ ಒಪ್ಪಿಸಿದರೆ;

(3) ಮುನ್ಸೂಚನೆಯ ನಿಖರತೆಯನ್ನು ಪ್ರಮಾಣೀಕರಿಸುವನೆಂಬ ನಂಬಿಕೆಗೆ ಎಡೆಗೊಡಬಹುದಾದ ರೀತಿಯಲ್ಲಿ ಭಾವೀ ವಹಿವಾಟುಗಳನ್ನು ಅವಲಂಬಿಸಿರುವ ಯಾವುದೇ ವರದಿ ಅಥವಾ ವಿವರಣೆಗೆ ಸಂಬಂಧಿಸಿ ತನ್ನ ಹೆಸರನ್ನು ಅಥವಾ ತನ್ನ ಫರ್ಮಿನ ಹೆಸರನ್ನು ಬಳಸಲು ಅನುಮತಿಸಿದರೆ;

(4) ಅವನು, ಅವನ ಫರ್ಮು ಅಥವಾ ಅವನ ಫರ್ಮಿನ ಪಾಲುದಾರನು ಗಮನಾರ್ಹ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯವಹಾರ ಉದ್ಯಮಕ್ಕೆ ನೀಡಿದ ಯಾವುದೇ ವರದಿ ಅಥವಾ ವಿವರಣೆಯ ಬಗ್ಗೆ, ತನ್ನ ವರದಿಯಲ್ಲಿ ಆ ಹಿತಾಸಕ್ತಿ ಯನ್ನು ಸಹ ಬಹಿರಂಗ ಪಡಿಸಿದ ಹೊರತು, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ;

(5) ತನಗೆ ತಿಳಿದಿರುವ ಮುಖ್ಯ ಸಂಗತಿಯನ್ನು ಬಹಿರಂಗಪಡಿಸುವುದು ತನ್ನ ವರದಿ ಅಥವಾ ವಿವರಣೆಯನ್ನು ತಪ್ಪು ದಾರಿಗೆ ಎಳೆಯದಂತೆ ಮಾಡಲು ಅವಶ್ಯವಾಗಿದ್ದರೂ ಅಂಥ ತನ್ನ ವರದಿಯಲ್ಲಿ ಅಥವಾ ವಿವರಣೆಯಲ್ಲಿ ಉದ್ದೇಶಪೂರ್ವಕವಾಗಿ ಆ ಸಂಗತಿಯನ್ನು ಬಚ್ಚಿಡಲು ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ ;

(6) ತನಗೆ ತಿಳಿದಿರುವ ಮತ್ತು ತನ್ನ ವೃತ್ತಿ ಸಾಮರ್ಥ್ಯದಲ್ಲಿ ತನಗೆ ಸಂಬಂಧಿಸಿರುವ ಮುಖ್ಯ ತಪ್ಪು ಹೇಳಿಕೆಯನ್ನು ತನ್ನ ವರದಿಯಲ್ಲಿ ಬಹಿರಂಗಪಡಿಸಲು ತಪ್ಪಿದರೆ ;

(7) ತನ್ನ ವೃತ್ತಿ ಕರ್ತವ್ಯಗಳ ನಿರ್ವಹಣೆಯನ್ನು ಅತಿಯಾಗಿ ನಿರ್ಲಕ್ಷಿಸಿದರೆ ;

(8) ಅಭಿಪ್ರಾಯದ ಅಭಿವ್ಯಕ್ತಿಯನ್ನು ಅಗತ್ಯಪಡಿಸುವಷ್ಟು ಮಾಹಿತಿಯನ್ನು ಪಡೆಯಲು ತಪ್ಪಿದರೆ, ಅಭಿಪ್ರಾಯದ ಅಭಿವ್ಯಕ್ತಿಯನ್ನು ನಿರಾಕರಿಸುವಷ್ಟು ಮುಖ್ಯವಾದ ವಿನಾಯಿತಿಗಳನ್ನು ಮಾಡಿದರೆ;

(9) ಕಾರ್ಯದರ್ಶಿ ವೃತ್ತಿಗೆ ಸಂಬಂಧಿಸಿ ಸಾಮಾನ್ಯವಾಗಿ ಅಂಗೀಕರಿಸಿದ ಪ್ರಕ್ರಿಯೆಯಲ್ಲಿನ ಯಾವುದೇ ಮುಖ್ಯ ಲೋಪದ ಕಡೆಗೆ ಗಮನ ಸೆಳೆಯಲು ತಪ್ಪಿದರೆ ;

(10) ತನ್ನ ಕಕ್ಷಿದಾರನ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಇಡಲು ಅಥವಾ ಆ ಹಣವನ್ನು ಪ್ರಸ್ತಾವಿತ ಉದ್ದೇಶಗಳಿಗಾಗಿ ಬಳಸಲು ತಪ್ಪಿದರೆ

-- ಅವನನ್ನು ವೃತ್ತೀಯ ದುರ್ನಡತೆಯ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು.

## ಭಾಗ-II

## ಸಂಸ್ಥೆಯ ಸದಸ್ಯರುಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಉಚ್ಚನ್ಯಾಯಾಲಯದ ಮೂಲಕ ಕ್ರಮವು ಅಗತ್ಯವಾಗುವ ವೃತ್ತೀಯ ದುರ್ನಡತೆ

ವೃತ್ತಿಯಲ್ಲಿ ಇರುವ ಅಥವಾ ಇಲ್ಲದಿರುವ ಈ ಸಂಸ್ಥೆಯ ಸದಸ್ಯನು,--

(1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ವಿನಿಯಮಗಳ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ;

(2) ಪರಿಷತ್ತು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರೆ ಕೃತ್ಯ ಅಥವಾ ಲೋಪದ ಬಗ್ಗೆ ತಪ್ಪಿತಸ್ಥನಾದರೆ

-- ಅವನನ್ನು ವೃತ್ತೀಯ ದುರ್ನಡತೆಯ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು.

* * * *